

## ನಮ್ಮ ಸುವರ್ಣ ಆಶಯ

ಮಹಾಬೋಧಿ ಸೊಸೈಟಿಯು 1956 ರಲ್ಲಿ ಪೂಜ್ಯ ಆಚಾರ್ಯ ಬುದ್ಧರಕ್ಷಿತರವರಿಂದ ಸ್ಥಾಪನೆಗೊಂಡು ಅವರ ಮಾರ್ಗದರ್ಶನದಲ್ಲಿ ಭಗವಾನ್ ಬುದ್ಧರು ಬೋಧಿಸಿದ ನಾಲ್ಕು ಪರಮ ಪವಿತ್ರ ಸತ್ಯಗಳನ್ನು, ಪಂಚಶೀಲಗಳನ್ನು, ಮಧ್ಯಮ ಮಾರ್ಗವನ್ನು, ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸುವುದರ ಜೊತೆಗೆ ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸೇವಾ ಕಾರ್ಯಗಳನ್ನು ನಡೆಸುತ್ತಾ ಬಂದಿದೆ.

2550ನೇ ಪವಿತ್ರ ಬುದ್ಧ ಜಯಂತಿಯು ಹಾಗು ಮಹಾಬೋಧಿ ಸೊಸೈಟಿಯ ಸುವರ್ಣಜಯಂತಿ ಮತ್ತು ಸುವರ್ಣ ಕರ್ನಾಟಕ ಜಯಂತಿಗಳ ನೆನಪಿಗಾಗಿ ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆಯಲ್ಲಿ 50 ಕನ್ನಡ ಪುಸ್ತಕಗಳನ್ನು ಪ್ರಕಟಿಸುವ ಆಶಯವುಳ್ಳವರಾಗಿದ್ದೇವೆ.

ಮನುಕುಲದ ಒಳಿತಿಗಾಗಿ ಭಗವಾನ್ ಬುದ್ಧರು ಉಪದೇಶಿಸಿದ ಸತ್ಯಗಳನ್ನು ಈ ಕಿರು ಕನ್ನಡದ ಪುಸ್ತಕಗಳಲ್ಲಿ ಸರಳ ಆಡುಭಾಷೆಯಲ್ಲಿ ಪ್ರಕಟಿಸಿ ಎಲ್ಲ ವಯೋಮಾನದವರಿಗೂ ಅರ್ಥವಾಗುವ ಪುಸ್ತಕಮಾಲಿಕೆ ಇದಾಗಲಿದೆ.

ಇಂದಿನ ಕಲುಷಿತ ಬದುಕಿನಿಂದ ನೆಮ್ಮದಿ ಕಳೆದುಕೊಂಡ ಮನಸುಗಳಿಗೆ ಸರಿ ತಪ್ಪುಗಳ ಅರಿವು ಮೂಡಿಸಿ ಸುಖ, ಶಾಂತಿ ಮತ್ತು ಜ್ಞಾನದ ದಾರಿದೀಪವಾಗಿ ಈ ಮಾಲಿಕೆ ಜನರ ಮನದಲ್ಲಿ ಸುವರ್ಣ ಬೆಳಕು ಚೆಲ್ಲಲಿ ಎನ್ನುವುದೇ ನಮ್ಮ ಆಶಯ.

**Maha Bodhi Society**
14, Kalidasa Road, Gandhinagar,
Bangalore - 560 009, India
Tel : 080-22250684, Fax: 080-22264438
Email : info@mahabodhi.info, www.mahabodhi.info

ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ 20

# ಬೌದ್ಧರು ಮೂರ್ತಿ ಪೂಜಕರೇ ?



ಪೂಜ್ಯ ಡಾ|| ಕೆ. ಶ್ರೀ ಧಮ್ಮಾನಂದ

ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ–20

# ಬೌದ್ಧರು ಮೂರ್ತಿ ಪೂಜಕರೇ ?

ಆಂಗ್ಲ ಮೂಲ :

**ಪೂಜ್ಯ ಡಾ॥ ಕೆ. ಶ್ರೀ ಧಮ್ಮಾನಂದ ನಾಯಕಥೇರ**

ಕನ್ನಡ ಅನುವಾದ :

**ಅನೀಶ್ ಬೋಧ್**

**ಬುದ್ಧ ವಚನ ಟ್ರಸ್ಟ್**
**ಮಹಾ ಬೋಧಿ ಸೊಸೈಟಿ**
ಗಾಂಧಿನಗರ, ಬೆಂಗಳೂರು–560 009

**Are Buddhist Idol-worshippers?**
Written by
**Venerable Dr. K. Sri Dhammananda** and
translated into Kannada by **Aneesh Bodh**
Donated by : **Devotees from Malaysia**

**ಮೊದಲ ಕನ್ನಡ ಆವೃತ್ತಿ ಅಕ್ಟೋಬರ್ 2008 – 6000 ಪ್ರತಿಗಳು**

ಪ್ರಕಾಶನ :
**ಬುದ್ಧ ವಚನ ಟ್ರಸ್ಟ್**
14, ಕಾಳಿದಾಸ ಮಾರ್ಗ
ಗಾಂಧಿನಗರ, ಬೆಂಗಳೂರು–560 009
ದೂರವಾಣಿ : 080–22250684
ಫ್ಯಾಕ್ಸ್ : 080–22264438
E-mail : info@mahabodhi.info

ಮುಖಪುಟ ವಿನ್ಯಾಸ : **ಶ್ರೀ ಮಂಜುನಾಥ**

ಮುದ್ರಕರು :
**ಶ್ರೀ ಅರವಿಂದ್ ಪ್ರಿಂಟರ್ಸ್**
ನಂ. 39, 7ನೇ ಅಡ್ಡರಸ್ತೆ, ಸರಸ್ವತಿಪುರ
ನಂದಿನಿ ಲೇಔಟ್, ಬೆಂಗಳೂರು–96
ದೂ : 23498198, ಮೊ : 9916461691

# The Gift of Dhamma Excels All Gifts

**The printing of this Dhamma book for free distribution is sponsored by the following kind donors from Malaysia:**

Andrew Goh Geok Seng,Ang Bee Ai,Angeline Tan,Anthony Yeo&Lee Wong Jin,Aw Cheong Chee,Aw Meng Cheong,Aw Su Yee,Bailey Kho and Tan Siew Bee,Basil Chan Jun Wei,Ben Yeow,Bugs Tan,Chan Huan Kiong,Chan Kah Yein,Chan Lay Sim & Jasmine Teoh,Charlie Chia,Cheah Chor Eng & Caroline,Cheong Pooi Wah,Chiam Swee Aun,Chiam Toon Jeu,Choo Swee Kim,Chow Siew Lin,Cindy Read (IMO Yip So Looi @ Yip Lai Choo),Dennis Koh,Doris Ng Kwi Lian, Ng Sing Cheong&Family,Dr. Pete Wong,Eddie Ng & mother,Eileen Chua,Elaine Low,Gan Bee Ling,Gan Soo Wan,Gan Teong Hock,Chan Kwee Tin,Goh Kah Boon,Goh Kue Lim&Alison Lim Kooi Hoon,Goh Wei Phern,Goh Wei Yang,Goh Xin Rou,Hong Choo Loo,Ivy Tan,Jackie Cheong & Family, Chong Chew Fong,Tan Bee Chun,Wong Siew Yin & family,Mabel Wee,P&P,Jackie Saye Kam Lin,Jennifer and Peter Ewe,Jenny & Tan Kok Hua,Joanna Chong,Joe Lai,Johnny & Choi Hui Nee,Joyce,Justin Choo,Kathryn Leong,KC Lee,Khema & Viro (IMO Poh Tat Chan),Khor Ching Wee & family,Kueh Kim Hiang & family,Kwee Peng,Lee Fong & Wei Yu,Lee Jaik Chin,Lee Lee Kim,Lee Mee Fong,Lee Sik Fong,Lee Wai Ling (IMO Tuen Soo Har),Lee Yu Ban,Lem Kooi Keong,Lem Kui Kee,Lem Thiem Bee,Leong Pow Neng,Lim Eu Jin,Lim Chin Kah,Lim Chin Kooi, Lim Gaik Suan & Lim Gaik Yeam (IMO Mr.Lim Thye Lee & Mdm Kang Swee Poh),Andrew Lim Teng Hun (IMO Junie Tan,Mdm.Lim Cheng Kim,Mr.Tan Ewe Hock), Lim Cui Yuan,Lim Kean Boon(IMO Lim Yee Teck,IMO Tan Geok Lian),Chua Poi Lang,Lim Sui Yuan,Lim Sui Lun,Lim Shin Wei,Lim Lay Chin,Lim Li Lian,Lim Mong Seng,Lim Jin Aun,Lim Siok Hoon,Lim Xin Le,Lim Yi Ren,Lim Zhi Zheng,Loi Hui Kong,Low May Lin,Mak Teck Meng & Yue Choy Kuan,Margaret Khoo Say Ean,Mr & Mrs Au Yeong,Mulyani Tan,Ng Beng Lean,Ng Hui Wen,Ng Swee Aun,Ng Wy Keith,Ng Wy Mynn,Ng Wy Sam,Ngeu Yet Meng & Teo Sor Hui,Ong Beng Choon,Ong Chin Leang,Ong Chin Yang,Ong Eng Teong (IMO Mdm. Tan Teh),Ong Khing Wee, Ong Mei Khing, Ong Xiang Yi,Paul Ferrini,Ramona Lai,See Kim Lan,Sim Geok Wah,Su Ying,Tai Cheng Chai,Tammy Goh,Tan Been,Tan Chen Koy,Tan Huat Chye (IMO Mdm Lee Chin Neo & Mr.Tan Ah Kow),Tan Hui Ning & sister,Tan Kuee Fong,Tan Siew Mee (IMO Tan Chee Eng & Lau Swee Chu),Tan Zhen Yuan,Tho Hui Tsin,Tina Cheah,Victor Tan,Wan Lai Peng,Wee Hwee Lyn,Wee Kim Hoo,Wee Tze Jieh,Wee Tze Shan,Wendy Chew,William Wong,Wong Bee Mi & family,Wong Fook Chai,Wong Lee Song,Y.F.Ho,Yap Yun Ching,Yeoh Poh Lee



**DEDICATION OF MERITS**

**May the merits accruing from this Dhamma Dana be to the well-being and happiness of all donors, departed ones and all beings.**

**May all beings share in the merits gained culminating in the attainment of Nibbana, the cessation of all suffering.**

***Sadhu, Sadhu, Sadhu***

# ಮೊದಲ ಮಾತು

**ಸಬ್ಬದಾನಂ ಧಮ್ಮ ದಾನಂ ಜಿನಾತಿ ।**
**ಸಬ್ಬರಸಂ ಧಮ್ಮ ರಸಂ ಜಿನಾತಿ**

ಭಗವಾನ್ ಬುದ್ಧರು ಉಪದೇಶಿಸಿದ ಧಮ್ಮಪದದ ಮಾತು ಇದು. ಎಲ್ಲಾ ದಾನಕ್ಕಿಂತ ಧಮ್ಮ ದಾನವು ಶ್ರೇಷ್ಠ, ಎಲ್ಲಾ ರಸಸ್ವಾದಕ್ಕಿಂತ ಧಮ್ಮ ರಸಸ್ವಾದ ಪರಮಾನಂದದಾಯಕವಾದದ್ದು.



**ಪೂಜ್ಯ ಆಚಾರ್ಯ**
**ಬುದ್ಧರಕ್ಖಿತ ಭಂತೇಜಿ**

ಹೌದು, ಸತ್ಯವಾಕ್ಯ ಇದು. ನಮ್ಮ ಇಡೀ ಬದುಕನ್ನು ನಾವು ಜೀವಿಸುವುದು ಆನಂದದಿಂದ ಬಾಳುವುದಕ್ಕೆ. ಅದಕ್ಕೆ ಮೂಲ ಬದುಕಿನಲ್ಲಿ ಶೀಲ–ಸನ್ನಡತೆ, ಸದಾಚಾರ ಶೀಲವಿದ್ದರೆ, ಸಮಾಧಾನ ಮತ್ತು ಸಂತೋಷ ತಾನಾಗಿಯೇ ಒದಗಿ ಬರುತ್ತವೆ.

ಕ್ರಿಸ್ತಪೂರ್ವ 3ನೇ ಶತಮಾನದಲ್ಲಿ ಬೌದ್ಧ ಮಹಾಸಾಮ್ರಾಟ ಅಶೋಕ, ನೆಮ್ಮದಿಯನ್ನು ಪಡೆದಿದ್ದು, ಆನಂದವನ್ನು ಹಂಚಿದ್ದು ಈ ಬೌದ್ಧ ಸರಣಗಳನ್ನು, ಶೀಲಗಳನ್ನು ಪಾಲಿಸಿದ ಮೇಲೆಯೇ. ಆತನಂತಹ ಮಹಾದಾನಿ ಬೇರೆ ಯಾರೂ ಇಲ್ಲ. ಬುದ್ಧ ಧಮ್ಮದ ದೀಪವನ್ನು ಬಹುಜನ ಸುಖಾಯ, ಬಹುಜನ ಹಿತಾಯ, ವಿಶ್ವದ ಎಲ್ಲಕಡೆಯೂ ಹಂಚಲಿಕ್ಕಾಗಿ ಆತ ತನ್ನ ಮಕ್ಕಳಾದ ಮಹಿಂದ ಮತ್ತು ಸಂಘಮಿತ್ರರನ್ನು ಸಂಘಕ್ಕೆ ದಾನ ಮಾಡಿದ. ಹಾಗೆಯೇ ಭಾರತದ ಉದ್ದಗಲಕ್ಕೂ 84,000 ಸ್ತೂಪಗಳನ್ನು ಕಟ್ಟಿಸಿದ. ಮಹಿಷ ಮಂಡಲ – ಈ ನಮ್ಮ ಕರ್ನಾಟಕಕ್ಕೂ



ಪೂಜ್ಯ ಯೋನ ರಕ್ಖಿತ ಎನ್ನುವ ಭಿಕ್ಖುವನ್ನು ಕಳುಹಿಸಿದ್ದ. ಭಾರತದಲ್ಲಿ ಬೆಳಗಿದ ಈ ಬುದ್ಧ ಬೆಳಕು, ಇಡೀ ವಿಶ್ವಕ್ಕೆ ಬೆಳಕಾಗಿ ವಿಶ್ವಜ್ಯೋತಿಯಾಯಿತು. ಶಾಂತಿಯ ತಂಪನ್ನರೆಯಿತು.

ಅದೇ ಕೆಲಸವನ್ನು ಮುಂದುವರೆಸಿ 1956ರಲ್ಲಿ ಪೂಜ್ಯ ಆಚಾರ್ಯ ಬುದ್ಧರಕ್ಖಿತ ಭಂತೇಜಿಯವರು ಬೆಂಗಳೂರಿನಲ್ಲಿ ಮಹಾಬೋಧಿ ಸಂಸ್ಥೆ ಕಟ್ಟಿದರು. ಬುದ್ಧಜ್ಞಾನ ದೀಪವನ್ನು ಹಿಡಿದು–ಐವತ್ತು ವರ್ಷ ಕರ್ನಾಟಕದಲ್ಲಿ ಅಡ್ಡಾಡಿದರು. ಈಗ ಈ ಸಂಸ್ಥೆಗೆ – ಆ ಬಹುಜನ ಸೇವೆಗೆ – ಸುವರ್ಣ ಜಯಂತಿ ಉತ್ಸವ. ಇಂತಹ ಚಿನ್ನದ ಹಬ್ಬದ ಸಂದರ್ಭದಲ್ಲಿ ಕರ್ನಾಟಕದ ಮನೆಮನೆಗೆ, ಕನ್ನಡದ ಮನಕ್ಕೆ ಒಂದೊಂದು ಬುದ್ಧ ವಚನದ ಸಂದೇಶದ ಹಣತೆಗಳನ್ನು, ಕೈಪಿಡಿಗಳನ್ನು ನೀಡಬೇಕೆಂದು ನಮ್ಮ ಭಂತೇಜಿಯವರ ಅಪೇಕ್ಷೆ. ಈ 50ರ ಹಬ್ಬದಲ್ಲಿ ಸುವರ್ಣ ಜಯಂತಿ ನೆನಪಿಗಾಗಿ – 50 ಕನ್ನಡ ಕೈಪಿಡಿಗಳನ್ನು ಪ್ರಕಟಿಸಿ, ಬುದ್ಧ ನೀಡಿದ ಉಪದೇಶವಾಣಿಯನ್ನು ಮನೆಗೆ – ಮನಕ್ಕೆ ಮುಟ್ಟಿಸುವ ಕಾರ್ಯದ ಕೃತಿ ಇದು.

ಈ ಕೃತಿಯ ಪ್ರಕಟಣೆಗಾಗಿ ದಾನವನ್ನು ನೀಡಿದ ಎಲ್ಲ ದಾನಿಗಳಿಗು ಹೃದಯಪೂರ್ವಕ ಕೃತಜ್ಞತೆಗಳು. ಅವರಿಗೆಲ್ಲ ಈ ಧಮ್ಮದಾನದ ಪುಣ್ಯಫಲದಿಂದ ಬೋಧಿ ದೊರಕಲಿ.

ದಯಮಾಡಿ ಈ ಧಮ್ಮ ಕಾಣಿಕೆಯನ್ನು ಸ್ವೀಕರಿಸಿ, ಭಗವಾನ್ ಬುದ್ಧರ ಮಹಾಕರುಣೆಯು, ನಿಮಗೆ ಸುಖ–ಶಾಂತಿ ಸಮೃದ್ಧಿಯನ್ನು ಹರಸಲಿ ಎಂದು ಹಾರೈಸುತ್ತೇವೆ.

*ಶುಭಾಶಯಗಳೊಡನೆ*
**ಆನಂದ ಭಂತೇಜಿ**
**ಪೂಜ್ಯ ಭಂತೇಜಿಗಳು, ಉಪಾಸಕ/ಉಪಾಸಕಿಯರು**
**ಮಹಾಬೋಧಿ ಸಂಸ್ಥೆಗಳು**

# ಪರಮಪೂಜ್ಯ ಡಾ॥ ಕೆ. ಶ್ರೀ ಧಮ್ಮಾನಂದ ನಾಯಕ ಮಹಾಥೇರ



"ಯಾರ ಆಕಾಂಕ್ಷೆಗಳು, ಸದಾ ಉದಾತ್ತ ವಾಗಿರುತ್ತದೋ, ಯಾರು ಪರರ ಜೀವನ ಗಳನ್ನು ಸಾರಯುತವನ್ನಾಗಿ ಮಾಡಿರು ವರೋ, ಯಾರು ಪರರ ಜೀವನಗಳಲ್ಲಿ ಶಾಂತಿಯನ್ನು ತರುವವರಾಗಿದ್ದಾರೋ, ಯಾರು ಈ ಜಗವನ್ನು ಜೀವಿಸಲು ಉತ್ತಮವನ್ನಾಗಿ ಮಾಡಿರುವರೋ ಯಾರ ಎಲ್ಲಾ ಕಾರ್ಯಗಳು ಸದಾ ಮೈತ್ರಿಯಿಂದ ಕೂಡಿರುವುದೋ ಮತ್ತು ಯಾರು ಸದಾ ಮುದಿತಾದಲ್ಲೆ ಆನಂದಿಸು ವರೋ ಅಂತಹವರು ಸದಾ ಆನಂದವಾಗಿ ಸುಖವಾಗಿ ಇರುತ್ತಾರೆ".

ಇದಕ್ಕೆ ಉದಾಹರಣೆ ಎನಿಸಿದಂತಹ ಈ ಮಹಾ ಪುರುಷರೇ ಡಾ॥ ಕೆ. ಶ್ರೀ ಧಮ್ಮಾನಂದರವರು. ಶ್ರೀಯುತರು 18ನೇ ಮಾರ್ಚಿ 1919ರಲ್ಲಿ ಶ್ರೀಲಂಕದ ಕಿರಿಂದೆ ಎಂಬ ಹಳ್ಳಿಯಲ್ಲಿ ಜನಿಸಿದರು. ಬಾಲ್ಯದಿಂದಲೇ ಬೌದ್ಧಾಸಕ್ತಿ ಹೊಂದಿದ್ದು 12ನೇ ವಯಸ್ಸಿಗೆ ಪೂಜ್ಯ ಕೆ. ಧಮ್ಮರತನ ಮಹಾಥೇರ ಅವರಿಂದ ಸಾಮಣೇರ ದೀಕ್ಷೆ ಪಡೆದರು. 22ನೇ ವಯಸ್ಸಿಗೆ ಉಪಸಂಪದ ಪಡೆದರು. ಇವರು ಶ್ರೀಲಂಕದ ಹಿರಿಯ ಅನೇಕ ನಾಯಕ ಥೇರರಿಂದ ಶಿಕ್ಷಣ ಪಡೆದು, 26ನೇ ವಯಸ್ಸಿಗೆ ಪಾಳಿ ತಿಪಿಟಕದಲ್ಲಿ ಡಿಪ್ಲೊಮಾ ಪಡೆದರು. 1945ರಲ್ಲಿ ಬನಾರಸ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದರು. 1949ರಲ್ಲಿ ಎಂ.ಎ. ಪಡೆದರು. ಭಾರತದ ರಾಷ್ಟ್ರಪತಿ ಯಾಗಿದ್ದ ರಾಧಾಕೃಷ್ಣನ್‌ರವರ ಆಶ್ರಯದಲ್ಲಿ ಸಂಸ್ಕೃತ, ಹಿಂದಿ ಮತ್ತು ಭಾರತದ ತತ್ವಶಾಸ್ತ್ರದಲ್ಲಿ ಅಧ್ಯಯನ ನಡೆಸಿದರು. 'ಶಾಸ್ತ್ರೀಯ' ಪದವಿ ಪಡೆದರು.

ನಂತರ ಬೌದ್ಧ ಧಮ್ಮದ ಉನ್ನತಿಗೆ ನಿರಂತರ ಶ್ರಮಿಸಿದರು. ಹಲವಾರು ಸಂಸ್ಥೆಗಳನ್ನು ಕಟ್ಟಿದರು. ಹಲವಾರು ಬೌದ್ಧ ಸಂಸ್ಥೆಗಳಿಗೆ ಪ್ರಧಾನ ಸಲಹಾಕಾರರು ಆದರು. ಬಹಳಷ್ಟು ಗ್ರಂಥಗಳನ್ನು ಬರೆದರು.



ಬೌದ್ಧ ಜಗತ್ತಿಗೆ ನಾಯಕರಂತೆ ಬೆಳಗಿದರು. ಅವರು ಅನೇಕ ಪದವಿ ಪಾರಿತೋಷಕಗಳನ್ನು ಪಡೆದರು. ಉದಾಹರಣೆಗೆ ಶಾಸ್ತ್ರೀಯ, ಧಮ್ಮಕೀರ್ತಿ, ಶ್ರೀ ಸದ್ಧಮ್ಮ ವಿಶಾರದ, ಪರಿಯತ್ತಿ ವಿಶಾರದ, ತಿಪಿಟಕಾ, ವಗಿಸ್ವರಚಾರ್ಯ ಮಹೋಪಾಧ್ಯಾಯ, ಬುದ್ಧಶಾಸನ ವಿಭೂಷಣ, ದರ್ಶನ ವಿಶಾರದ, ಸಾಹಿತ್ಯ ಚಕ್ರವರ್ತಿ, ಸಧಮ್ಮ ಪ್ರವತ್ರಿಕಾ ಚಕ್ರವರ್ತಿ, ಪಿ.ಹೆಚ್.ಡಿ.ಗಳು ಇತ್ಯಾದಿ ಪದವಿಗಳನ್ನು ಬಿರುದುಗಳನ್ನು ದೇಶ ವಿದೇಶಗಳಲ್ಲಿ ಪಡೆದರು.

ಶ್ರಿಯುತ ಧಮ್ಮಾನಂದರವರು ಆಧುನಿಕ ಬೌದ್ಧ ಜಗತ್ತಿನಲ್ಲಿ ನಾಯಕರಂತೆ ವಿಜೃಂಭಿಸಿದರು. ಅವರು ಶಾಸನ ಅಭಿವೃದ್ಧಿ ವರ್ಧನಾ ಸೊಸೈಟಿ, ಮಲೇಶಿಯಾದ ಯುವ ಬೌದ್ಧ ಮಂಡಳಿ, ಮಾನವತಾ ತತ್ವ ಸ್ನೇಹ ಗುಂಪಿಗೆ, ವಿದ್ಯಾವರ್ಧನಾ ಪಿರಿವೇಣ ಶ್ರೀಲಂಕಗೆ ಆಶ್ರಯದಾತ ರಾಗಿದ್ದಾರೆ. ಮಲೇಶಿಯಾದ ಬುದ್ಧಿಷ್ಟ್ ಮಿಷನರಿ ಸೊಸೈಟಿಯ ಧಾರ್ಮಿಕ ನಿರ್ದೇಶಕರು, ಸ್ಥಾಪಕರು ಮತ್ತು ಪ್ರಧಾನ ಸಲಹಾಕಾರರು ಆಗಿದ್ದರು. ಅವರು 50ಕ್ಕೂ ಹೆಚ್ಚು ಬೌದ್ಧ ಸಂಸ್ಥೆಗಳಿಗೆ ಪ್ರಧಾನ ಸಲಹಕಾರ ಆಗಿದ್ದರು. ಮಲೇಶಿಯಾ, ಸಿಂಗಪೂರ, ಶ್ರೀಲಂಕದ ಸಂಘ ಕೌನ್ಸೆಲ್‌ಗೆ ಅಧ್ಯಕ್ಷರಾಗಿದ್ದರು. ಹಾಗು ಹಲವಾರು ದೇಶ ವಿದೇಶ ಸಂಸ್ಥೆಗಳಿಗೆ ನಿರ್ದೇಶಕರು, ಛೇರ್‌ಮನ್, ಸಲಹಾಕಾರರು ಆಗಿದ್ದರು.

ಎಲ್ಲಕ್ಕಿಂತ ಹೆಚ್ಚಾಗಿ ಅವರು ಅದ್ವಿತೀಯ ಲೇಖಕರಾಗಿದ್ದರು. ಸ್ವತಂತ್ರ ಶೈಲಿಯಲ್ಲಿ ಅವರು ಬೌದ್ಧ ದರ್ಶನಗಳನ್ನು ಬರೆದರು. ದೇಶ ವಿದೇಶಗಳಲ್ಲಿ ಧಮ್ಮವನ್ನು ಹರಡಿದರು. ಬೌದ್ಧ ಧಮ್ಮಕ್ಕಿರುವ ಮಿಥ್ಯಾ ಅಪವಾದಗಳನ್ನು ದೂರಿಕರಿಸಿದರು. ಅಲ್ಪ ಕಾಲದಲ್ಲೇ ಅವರು ಶ್ರೀಲಂಕ, ಬರ್ಮ, ಸಿಂಗಪೂರ, ಮಲೇಶಿಯಾ, ಥೈಲ್ಯಾಂಡ್, ಥೈವಾನ್, ಜಪಾನ್, ನ್ಯೂಜಿಲ್ಯಾಂಡ್, ಇಂಗ್ಲೆಂಡ್, ಅಮೆರಿಕಾದಲ್ಲೂ ಅವರು ಜನಪ್ರಿಯತೆ ಪಡೆದರು.

ಪೂಜ್ಯ ಶ್ರೀ ಧಮ್ಮಾನಂದ ಥೇರರು 31ನೇ ಆಗಸ್ಟ್ 2006ರಂದು ಇಹಲೋಕ ತ್ಯಜಿಸಿದರು.

# ಬೌದ್ಧರು ಮೂರ್ತಿ ಪೂಜಕರೇ ?

## ಶ್ರದ್ಧೆಯ ಚಿಹ್ನೆಗಳು :

ಪ್ರತಿಯೊಂದು ಧರ್ಮದಲ್ಲಿ ಶ್ರದ್ಧೆಗೆ (ಅತ್ಯಂತ ಆಳ ಆದರದ ಗೌರವ) ಹಲವಾರು ವಸ್ತು ವಿಷಯಗಳಿವೆ ಅಥವಾ ಚಿಹ್ನೆಗಳಿವೆ. ಬೌದ್ಧ ಧಮ್ಮದಲ್ಲೂ 3 ಮುಖ್ಯ ಧಾರ್ಮಿಕ ಚಿಹ್ನೆಗಳಿವೆ. ಅವನ್ನು ಶ್ರದ್ಧಾಪೂರ್ವಕ ಗೌರವಿಸುತ್ತಾರೆ ಮತ್ತು ಪೂಜಿಸುತ್ತಾರೆ. ಅವೆಂದರೆ :

- **ಶಾರೀರಿಕ** ಅಥವಾ ಬುದ್ಧ ಭಗವಾನರ ಭೌತಿಕ ಅಸ್ತಿ ಅವಶೇಷ;
- **ಉದ್ದೇಶಿಕ** ಅಥವಾ ಬುದ್ಧ ಭಗವಾನರ ಪ್ರತಿಮೆ, ಚೇತಿಯ (ಚೈತ್ಯ) ಅಥವಾ ಪಗೋಡ;
- **ಪರಿಭೋಗಿಕ** ಅಥವಾ ಬುದ್ಧ ಭಗವಾನರು ಬಳಸಿದ್ದ ವ್ಯಕ್ತಿಗತ ವಸ್ತುಗಳು.

ಇಡೀ ಜಗತ್ತಿನಲ್ಲಿ ಬೌದ್ಧರು ತಮ್ಮ ಸಂಪ್ರದಾಯದಂತೆ ಈ 3 ರೀತಿಯ ಚಿಹ್ನೆಗಳನ್ನು ಗೌರವಿಸುತ್ತಾರೆ ಹಾಗೂ ಪೂಜಿಸುತ್ತಾರೆ. ಹಾಗೆಯೇ ಬೌದ್ಧ ಸಂಪ್ರದಾಯದಲ್ಲಿ ಬುದ್ಧ ಪ್ರತಿಮೆಗಳನ್ನು ಚೈತ್ಯ ಅಥವಾ ಪಗೋಡಗಳ ಜೊತೆ ಬೋಧಿ ವೃಕ್ಷವನ್ನು ಸಹಾ ಪ್ರತಿ ಬೌದ್ಧ ಮಂದಿರದಲ್ಲಿ ಆರಾಧನಾ ಚಿಹ್ನೆಯಾಗಿ ಬಳಸುತ್ತಾರೆ.

ಬಹಳಷ್ಟು ಜನರಿಗೆ ಬೌದ್ಧರು ವಿಗ್ರಹಗಳನ್ನು ಪ್ರಾರ್ಥಿಸುತ್ತಾರೆ ಎಂದು ಅಚ್ಚೊತ್ತಿದೆ. ಆದರೆ ಈ ತಿಳುವಳಿಕೆಗೆ ಕಾರಣ ಏನೆಂದರೆ ಅವರಿಗೆ ಬುದ್ಧರ ಬಗ್ಗೆಯಾಗಲಿ, ಬುದ್ಧರ ಬೋಧನೆಯ ಬಗ್ಗೆಯಾಗಲಿ ಮತ್ತು ಬೌದ್ಧರ ಆಚರಣೆ ಮತ್ತು ಸಂಪ್ರದಾಯದ ಬಗ್ಗೆ ಜ್ಞಾನದ ಕೊರತೆ ಇರುವುದು.



ಮೂರ್ತಿ ಪೂಜೆಯ ಸಾಮಾನ್ಯ ಅರ್ಥ ಏನೆಂದರೆ ಕೆಲವು ದೇವಿ ಮತ್ತು ದೇವರುಗಳ ವಿವಿಧ ಆಕಾರಗಳಿಗೆ ಮೂರ್ತಿಗಳನ್ನು ನಿರ್ಮಿಸುವುದು ಮತ್ತು ಭಕ್ತರು ಆ ಮೂರ್ತಿಯಿಂದ ಧನ್ಯತೆ ಹಾಗೂ ರಕ್ಷಣೆಯನ್ನು ಕೋರುತ್ತಾ ಪ್ರಾರ್ಥಿಸುವುದು. ಯಾಚಕರು ಆ ಮೂರ್ತಿಯಿಂದ ಆರೋಗ್ಯ, ಐಶ್ವರ್ಯ ಉನ್ನತಿಯನ್ನು ಬೇಡುವದು. ಈ ರೀತಿಯ ಪದ್ಧತಿಯು ಬಹುಪಾಲು ಆಸ್ತಿಕ ಧರ್ಮಗಳಲ್ಲಿ ಕಂಡುಬರುವುದು. ಕೆಲವು ಯಾಚಕರು ಮೂರ್ತಿಯಿಂದ ತಮ್ಮ ವ್ಯಕ್ತಿಗತ ಕೋರಿಕೆಗಳೆಲ್ಲವನ್ನು ಬೇಡುವರು. ಕೆಲವರಂತು ತಮ್ಮ ಪಾಪಕೃತ್ಯಗಳನ್ನು ಹಾಗು ಕ್ರೂರ ಕೃತ್ಯಗಳನ್ನು ನೆರವೇರಿಸಲು ಯಾಚಿಸುವರು ಹಾಗೆಯೇ ಅವರು ಪಾಪಕ್ಕೆ ಕ್ಷಮೆಯನ್ನು ಯಾಚಿಸುವರು.

ಆದರೆ ಬೌದ್ಧರ ಪೂಜಾ ವಿಧಾನವು ಇವೆಲ್ಲಕ್ಕಿಂತ ವಿಭಿನ್ನವಾದುದು. ಆದ್ದರಿಂದಾಗಿ **'ಪ್ರಾರ್ಥನೆ'** ಎಂಬ ಪದವೇ ಬೌದ್ಧರ ಪ್ರಕಾರ (ಬೌದ್ಧ ಶಬ್ದಕೋಶದಲ್ಲಿ) ಇಲ್ಲ. ಬೌದ್ಧರಲ್ಲಿ **'ಗೌರವಾರ್ಪಣೆಯುಳ್ಳ ಪೂಜೆ'** ಎಂಬುದು ಸರಿಯಾದ ಶಬ್ದವಾಗಿದೆ. ಬೌದ್ಧರು ಪ್ರತಿಮೆಗಳಿಗೆ ಮತ್ತು ಚಿತ್ರಪಟಗಳಿಗೆ ಪ್ರಾರ್ಥಿಸುವುದಿಲ್ಲ. ಬದಲಾಗಿ ಅವರು ಪೂಜ್ಯತೆಗೆ ಗೌರವಕ್ಕೆ ಅರ್ಹರಾದ ಪರಮ ಶ್ರೇಷ್ಠ ಗುರುವಿಗೆ ಹೃದ್ಭರಿತ ಗೌರವಾರ್ಪಣೆ ಅರ್ಪಿಸುತ್ತಾರೆ. ಬುದ್ಧ ವಿಗ್ರಹಗಳ ಸ್ಥಾಪನೆಯ ಕಾರಣವೇನೆಂದರೆ ಅಸಾಮಾನ್ಯ ಅನುಪಮ ಧಮ್ಮಗುರುಗಳ ಪರಮೋಚ್ಚ ಸಂಬೋಧಿ ಮತ್ತು ಪರಿಪೂರ್ಣತೆಗೆ ಅಭಿನಂದನಾತ್ಮಕವಾಗಿ ಮತ್ತು ಗೌರವಸೂಚಕವಾಗಿ ಶ್ರದ್ಧೆಯಿಂದ ನಮನಗಳನ್ನು ಅರ್ಪಿಸುವುದಾಗಿದೆ. ಬೌದ್ಧರಿಗೆ ಈ ಚಿತ್ರವಾಗಲಿ ಅಥವಾ ಪ್ರತಿಮೆಯಾಗಲಿ ಕೇವಲ ಚಿಹ್ನೆಯಾಗಿದೆ, ಸಂಕೇತವಾಗಿದೆ. ಅದು ಅವರಿಗೆ ಬುದ್ಧರನ್ನು ನೆನಪಿಸಿಕೊಳ್ಳಲು ಸಹಾಯ ಮಾಡುತ್ತದೆ.

ಬೌದ್ಧರು ಪ್ರತಿಮೆಯ ಮುಂದೆ ಬಾಗಿ ಅಪಾರ ಗೌರವ ಅರ್ಪಿಸುತ್ತಾರೆ (ಅದು ಪ್ರತಿಮೆಗಲ್ಲ, ಬುದ್ಧರಿಗಾಗಿ). ಅವರು ಆಕಾರದಿಂದ ಪ್ರಾಪಂಚಿಕತೆಯನ್ನು ಹುಡುಕುವುದಿಲ್ಲ, ಬದಲಾಗಿ ಬುದ್ಧರ ಭವ್ಯ ವ್ಯಕ್ತಿತ್ವದಿಂದ ಸ್ಫೂರ್ತಿ ಪಡೆಯಲು ಕಲ್ಪಿಸಿ ಧ್ಯಾನಿಸುತ್ತಾರೆ. ಬುದ್ಧರ ಬೋಧನೆಯನ್ನು ಅನುಸರಿಸುತ್ತಾ ಅವರ ಪರಿಪೂರ್ಣತೆ ಹೊಂದಲು ಪಾರಮಿತಗಳನ್ನು ಅನುಕರಿಸುತ್ತಾರೆ.

ಬೌದ್ಧರು ಮೂರ್ತಿಯು ಬಿಂಬಿಸುವಂತೆ ಪರಮಶ್ರೇಷ್ಠ ಧಮ್ಮಶಾಸ್ತರಿಗೆ, ಅವರ ಶ್ರೇಷ್ಠ ಸದ್ಗುಣಗಳಿಗೆ ಮತ್ತು ಪಾವಿತ್ರತೆಗಳಿಗೆ ಗೌರವಿಸುತ್ತಾರೆ. ವಾಸ್ತವವಾದ ಅಂಶ ಏನೆಂದರೆ ಪ್ರತಿಯೊಂದು ಧರ್ಮದಲ್ಲೂ ಅವರವರ ಗುರುಗಳಿಗೆ ಆಕಾರ ರೂಪದಿಂದಾಗಲಿ ಅಥವಾ ನಿರಾಕಾರ ರೂಪದಿಂದಾಗಲಿ ಅಥವಾ ಮಾನಸಿಕ ರೂಪದಿಂದಾಗಲಿ ಅಥವಾ ಸದ್ಗುಣ ರೂಪದಿಂದಾಗಲಿ ಭಕ್ತಿಯನ್ನು ಸೂಚಿಸುತ್ತಾರೆ. ಆದ್ದರಿಂದಾಗಿ ಬೌದ್ಧರಿಗೆ ಮೂರ್ತಿ ಪೂಜಕರೆಂದು ಟೀಕಿಸುವುದು ನ್ಯಾಯಬದ್ಧವಲ್ಲ.

ಬೌದ್ಧರು ಬುದ್ಧರಿಗೆ ಗೌರವಾರ್ಪಣೆ ಮಾಡುವುದು ಭಯದಿಂದಲ್ಲ ಅಥವಾ ಲೌಕಿಕ ಆಮಿಷಕ್ಕೂ ಅಲ್ಲ. ಪೂಜ್ಯರಾದ, ಗೌರವಾರ್ಹರಾದ ಗುರುಗಳನ್ನು ಗೌರವಿಸುವುದು ಸುಸಂಸ್ಕೃತಿಯ ಲಕ್ಷಣ ಹಾಗು ಅದು ಪುಣ್ಯಕಾರ್ಯ ಎಂದು ನಂಬಿರುವುದು. ಅದು ನಿಜಕ್ಕೂ ಮಂಗಳಕರ ವಾಗಿದೆ. ಇನ್ನೊಂದು ಮಹತ್ತರವಾದ ಅಂಶವೇನೆಂದರೆ ತಮ್ಮ ವಿಮೋಚನೆಗೆ ತಮ್ಮಿಂದಲೇ ಸಾಧ್ಯ (ಪರರಿಂದಲ್ಲ) ಎಂದು ನಂಬಿದ್ದಾರೆ ಮತ್ತು ಮೂರನೆಯ ಮಧ್ಯವರ್ತಿಗೆ ಅವರು ಅವಲಂಬಿಸುವುದಿಲ್ಲ. ಹಾಗಿರುವಾಗಲೂ ಕೆಲವರು ಮೂರ್ತಿ ಪೂಜೆಯಿಂದ ವಿಮೋಚನೆ ಎಂದು ನಂಬಿರುವವರಿದ್ದಾರೆ. ಅಂತಹವರಿಂದಲೇ ಬೌದ್ಧರ ಮೇಲೆ ವಿಗ್ರಹ ಆರಾಧಕರು ಎಂಬ ಮುದ್ರೆ ಬಂದಿದೆ. ವ್ಯಕ್ತಿಯ ಭೌತಿಕ



ಶರೀರವು ವಿಘಟಿತವಾಗಬಹುದು ಹಾಗು ನಾಲ್ಕು ಮಹಾ ಭೂತಗಳೊಂದಿಗೆ ಲೀನವಾಗಬಹುದು. ಆದರೆ ಆ ವ್ಯಕ್ತಿಯ ಶ್ರೇಷ್ಠ ಸದ್ಗುಣಗಳು ಎಂದಿಗೂ ಹಾಗೆ ಉಳಿದಿರುತ್ತದೆ. ಬೌದ್ಧರು ಅಂತಹ ಶ್ರೇಷ್ಠ ಸದ್ಗುಣಗಳಿಗೆ ಗೌರವಿಸುತ್ತಾರೆ ಹಾಗು ಅಭಿನಂದಿಸುತ್ತಾರೆ. ಅದರಿಂದಾಗಿ ಬೌದ್ಧರ ಮೇಲಿರುವ ಮಿಥ್ಯ ಆರೋಪಗಳು ದೌರ್ಭಾಗ್ಯಯುತವಾದುದು, ಪೂರ್ಣವಾಗಿ ತಪ್ಪಾಗಿರುವಂತಹುದು ಮತ್ತು ಅಪ್ರಾಸಂಗಿಕವಾದುದು ಆಗಿದೆ.

ಬೋಧನೆಗಳಿಂದ ನಾವು ಅರಿತಿರುವುದು ಏನೆಂದರೆ ವಿಮುಕ್ತಿಯ ಸರಿಯಾದ ಮಾರ್ಗವನ್ನು ತೋರಿಸಿದ ಗುರುವೇ ಬುದ್ಧರೆಂಬುದು. ಆದರೆ ಶಿಷ್ಯರ ಕರ್ತವ್ಯಗಳು ಏನೆಂದರೆ ಗುರುವಿಗೆ ಅವಲಂಬಿತವಾಗದೆ ಧಮ್ಮದ ಪರಿಶುದ್ಧ ಜೀವನವನ್ನು ಆಚರಿಸುವುದು ಮತ್ತು ಚಿತ್ತಪರಿಶುದ್ಧತೆ ಪ್ರಾಪ್ತಿಗೊಳಿಸುವುದು. ಬುದ್ಧರ ಪ್ರಕಾರ ದೇವರು ಇಲ್ಲ. ಹಾಗೆಯೇ ಜನರನ್ನು ನರಕಕ್ಕೆ ಅಥವಾ ಸ್ವರ್ಗಕ್ಕೆ ಕಳುಹಿಸುವಂತಹ ಯಾವುದೇ ವ್ಯಕ್ತಿಯಾಗಲಿ ಅಥವಾ ಧರ್ಮಗುರುವಾಗಲಿ ಇಲ್ಲ. ಮಾನವ ತನ್ನ ಚಿಂತನೆಗಳಿಂದಲೇ, ಕಾರ್ಯಗಳಿಂದಲೇ ಅಥವಾ ಮಾತಿನಿಂದಲೇ ಸ್ವರ್ಗವನ್ನು ಅಥವಾ ನರಕವನ್ನು ಸೃಷ್ಟಿಸಬಲ್ಲ. ಆದ್ದರಿಂದಾಗಿ ಕೆಟ್ಟ ಯೋಚನೆಗಳನ್ನು ಮನಸ್ಸಿನಿಂದ ತೆಗೆಯದೆ ಮಧ್ಯವರ್ತಿಯನ್ನು ವಿಮೋಚನೆಗಾಗಿ ಪ್ರಾರ್ಥಿಸುವುದರಲ್ಲಿ ಯಾವ ಉಪಯೋಗವೂ ಇಲ್ಲ, ಅರ್ಥವೂ ಇಲ್ಲ. ಹೀಗಿರುವಾಗ ಬೌದ್ಧರಲ್ಲೇ ಕೆಲವರು ಪೂಜಿಸುವಾಗ ಬುದ್ಧರಿಂದ ತಮ್ಮ ಕಷ್ಟಗಳಿಗೆ, ದೌರ್ಭಾಗ್ಯಕ್ಕೆ ಮತ್ತು ಸಮಸ್ಯೆಗಳಿಗೆ ಪರಿಹಾರ ನೀಡುವಂತೆ ಬುದ್ಧರಲ್ಲಿ ಪ್ರಾರ್ಥಿಸುತ್ತಾರೆ.

ಇವೆಲ್ಲಾ ನಿಜ ಬೌದ್ಧ ಆಚರಣೆಗಳಲ್ಲ, ಆದರೂ ಅಂತಹ ಭಕ್ತಿಯುತ ಕ್ರಿಯೆಗಳಿಂದ ಸ್ವಲ್ಪ ಭಾವೋದ್ರೇಕದ ಸಮಾಧಾನವಾಗುತ್ತದೆ ಮತ್ತು ತಮ್ಮ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಧೈರ್ಯ ಮತ್ತು ದೃಢತೆಗಳಿಸಲು

ಯಾಚಕರಿಗೆ ಸ್ಫೂರ್ತಿ ಸಿಗುತ್ತದೆ. ಇದು ಸಹಾ ಸರ್ವ ಧರ್ಮಗಳಲ್ಲಿನ ಸಾಮಾನ್ಯ ಅಂಶವಾಗಿದೆ. ಆದರೆ ಸಮಸ್ಯೆಗಳ ಮೂಲ ಕಾರಣಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಪ್ರಜ್ಞಾವಂತರಿಗೆ ಇಂತಹ ಆಚರಣೆಗಳು ಬೇಕಿಲ್ಲ. ಬೌದ್ಧರಲ್ಲಿ ಗಾಥೆಗಳನ್ನು/ಸುತ್ತಗಳನ್ನು ಪಠಿಸುವ ಪರಿಯಿದೆ. ಇದು ಏತಕ್ಕೆ ಎಂದರೆ ಅವುಗಳಲ್ಲಿ ಬುದ್ಧರ ಪವಿತ್ರ ಶೀಲಗಳ ವಿವರಣೆಯಿದೆ. ಈ ರೀತಿ ನೆನೆಯುವ ಮೂಲಕ ಅವರು ಬುದ್ಧರನ್ನು ಗೌರವಿಸುತ್ತಾರೆ. ಈ ಗಾಥೆಗಳು ದೇವರಲ್ಲಿ ಬೇಡುವ ಪ್ರಾರ್ಥನೆಗಳಲ್ಲ, ಅಥವಾ ಪಾಪಗಳನ್ನು ತೊಳೆಯಲು ದೇವತೆಗಳಲ್ಲಿ ಯಾಚನೆಯಲ್ಲ. ಬದಲಾಗಿ ಈ ಗಾಥೆಗಳು ಪರಮಶ್ರೇಷ್ಠ ಗುರುವಿಗೆ ಹೃತ್ಪೂರ್ವಕ ನಮನಗಳಾಗಿವೆ. ಏಕೆಂದರೆ ಆ ಮಹಾಪುರುಷರು ಮಾನವತೆಗಾಗಿ, ಮನುಕುಲದ ಒಳಿತಿಗಾಗಿ ಸುಶ್ರೇಷ್ಠ ಮಾರ್ಗ ಕಂಡುಹಿಡಿದು ವಿಮುಕ್ತಿ ಹಾದಿ ತೋರಿಸಿದಂತವರು ಅದಕ್ಕಾಗಿ ಪರಮಶ್ರೇಷ್ಠ ಸಮ್ಮಾಸಂಬೋಧಿ ಪ್ರಾಪ್ತಿ ಮಾಡಿದವರು. ಬೌದ್ಧರು ಬುದ್ಧರನ್ನು ಕೃತಜ್ಞತಾಪೂರ್ವಕವಾಗಿ ಪೂಜಿಸಿದರೆ, ಪರರು ಕೇವಲ ತಮ್ಮ ಸ್ವಲಾಭಕ್ಕಾಗಿ ಮತ್ತು ಸ್ವಾರ್ಥಕ್ಕಾಗಿ ಪ್ರಾರ್ಥಿಸುತ್ತಾರೆ. "ಪೂಜ್ಯರಿಗೆ ಪೂಜಿಸು, ಗೌರವಾನ್ವಿತರಿಗೆ ಗೌರವಿಸು" ಇದು ಬುದ್ಧರ ಬುದ್ಧಿವಾದವಾಗಿದೆ. ಆದ್ದರಿಂದ ಬೌದ್ಧರು ಗೌರವಾನ್ವಿತ, ಗೌರವಾರ್ಹ ಯಾವುದೇ ಧರ್ಮದ ಗುರುವಿಗೆ ಗೌರವಿಸುತ್ತಾರೆ.

ಬೌದ್ಧರು ಪ್ರಾರ್ಥನೆಗಳ ಬದಲು ಧ್ಯಾನವನ್ನು ಅಭ್ಯಸಿಸುತ್ತಾರೆ. ಏಕೆಂದರೆ ಧ್ಯಾನವು ಸ್ವಶಿಸ್ತಿನ ಹಾಗು ಮನೋವಿಕಾಸದ ಸುಶಿಕ್ಷಣವಾಗಿದೆ. ಧ್ಯಾನಕ್ಕಾಗಿ ಧ್ಯಾನ ವಿಷಯವು ಅಗತ್ಯವಾಗಿದೆ. ಮನಸ್ಸನ್ನು ಕೇಂದ್ರೀಕರಿಸಲು ಧ್ಯಾನ ವಿಷಯದ ವಿನಃ ಧ್ಯಾನ ಅಸಾಧ್ಯ. (ಬೌದ್ಧರಲ್ಲಿ ಧ್ಯಾನಕ್ಕಾಗಿ ಅಸಂಖ್ಯಾತ ಧ್ಯಾನ ವಿಷಯಗಳಿವೆ). ಬೌದ್ಧರು ಕೆಲವೊಮ್ಮೆ ಬುದ್ಧರ ಭಾವಚಿತ್ರವನ್ನು ಅಥವಾ ಬುದ್ಧರ ಪ್ರತಿಮೆಯನ್ನು ಇಟ್ಟು ಧ್ಯಾನಿಸುತ್ತಾರೆ. ಇದರಿಂದಾಗಿ ಅವರ ಮನಸ್ಸು ಸುಲಭವಾಗಿ ಏಕಾಗ್ರವಾಗುತ್ತದೆ.



ಧ್ಯಾನಕ್ಕಾಗಿ ಹಲವಾರು ಧ್ಯಾನ ವಿಷಯ ವಸ್ತುಗಳಿದ್ದರೂ ದೃಶ್ಯಭರಿತ ಧ್ಯಾನ ವಿಷಯವು ಮನಸ್ಸಿಗೆ ಹೆಚ್ಚು ಹೃದಯಸ್ಪರ್ಶಿಯಾಗಿರುತ್ತದೆ. ಕಣ್ಣಿನ ಮೂಲಕ ಗ್ರಹಿಸಿದ ವಿಷಯವು ಇತರ ಇಂದ್ರೀಯಗಳಿಂದ ಗ್ರಹಿಸಿದ ವಿಷಯಗಳಿಗಿಂತ ಹೆಚ್ಚು ಪ್ರಭಾವಶಾಲಿ ಆಗಿರುತ್ತದೆ. ಆದ್ದರಿಂದ ಕಣ್ಣಿನ ಮೂಲಕ ಗ್ರಹಿಸುವ ವಿಷಯವು ಮನಸ್ಸಿಗೆ ನಾಟಲು ಹೆಚ್ಚು ಸಹಾಯಕ ಸುಲಭ ಹಾಗು ಉತ್ತಮವಾದ ಏಕಾಗ್ರತೆ ಲಭಿಸುವಂತೆ ಮಾಡುತ್ತದೆ.

ಆಕಾರಗಳು ಆಳ ಮನಸ್ಸಿನ ಭಾಷೆಯಾಗಿದೆ. ಆದ್ದರಿಂದ ಒಂದುವೇಳೆ ಬುದ್ಧರ ಪ್ರತಿಮೆಯಿಂದಾದ ಪರಿಪೂರ್ಣತೆಯ ಸಾಕಾರತೆಯು ಒಳಮನಸ್ಸಿನಲ್ಲಿ ಏಕಾಗ್ರತವಾದರೆ ಅದು ಬಾಹ್ಯದಲ್ಲೂ ಪರಿಣಾಮಕಾರಿಯಾಗಿ, ಬಲಿಷ್ಠವಾಗಿ ಹೊರಹೊಮ್ಮಿ ಸ್ವಾಭಾವಿಕವಾಗಿ ಅಕುಶಲ ಮಿಡಿತಗಳನ್ನೆಲ್ಲಾ ಮುರಿದು ಹಾಕುತ್ತದೆ.

ಬುದ್ಧರ ಸಾಕಾರ ರೂಪವು ಮನಸ್ಸಿನ ಮೇಲೆ ಲಾಭದಾಯಕವಾಗಿ ಅಚ್ಚೊತ್ತುತ್ತದೆ. ಬುದ್ಧ ಭಗವಾನರ ಅಪ್ರತಿಮ ಅನುಪಮ ಸಾಧನೆಗಳು ಅನುಸ್ಮೃತಿ ಮಾಡತೊಡಗಿದರೆ ಅದರಿಂದ ಮನವು ಆನಂದಿತವಾಗುತ್ತದೆ. ಮನಸ್ಸನ್ನು ಸುಶಕ್ತಿಯುತವನ್ನಾಗಿ ಮಾಡುತ್ತದೆ. ಮಾನವನಿಗೆ ಅಧೋ ದಿಕ್ಕಿನ ಕಡೆಗೆ ಎಳೆಯುವ ಅವಿಶ್ರಾಂತಿ, ಒತ್ತಡ ಮತ್ತು ಖಿನ್ನತೆಗಳಿಂದ ಮೇಲಕ್ಕೆತ್ತುತ್ತದೆ.

ಅನುಸ್ಮೃತಿಗಳಲ್ಲಿ ಒಂದಾದ 'ಬುದ್ಧಾನುಸ್ಸತಿ' ಧ್ಯಾನವಂತು ಸಾಧಕರಲ್ಲಿ ಭಕ್ತಿಯ ಆನಂದ ಉಕ್ಕಿಸುತ್ತದೆ. ಹಾಗು ಅಚಲ ಶ್ರದ್ಧೆಯನ್ನು ಉಂಟು ಮಾಡಿ ಬುದ್ಧರನ್ನು ಅವರ ಶ್ರೇಷ್ಠತೆಯನ್ನು ಅರಿಯುವ ಸಾಮರ್ಥ್ಯ ಸಿಗುತ್ತದೆ ಹಾಗೂ ಅವರ ಶ್ರೇಷ್ಠತೆ ಬಗ್ಗೆ ಅಭಿನಂದನೆ ಮತ್ತು ಅಭಿಮಾನ ಉಂಟಾಗುತ್ತದೆ. ಆದ್ದರಿಂದ **ಬುದ್ಧರ ಪ್ರತಿಯೊಂದು ಪೂಜೆಯನ್ನು ಧ್ಯಾನವೆಂದು ಪರಿಗಣಿಸಬೇಕೆ ಹೊರತು ವಿಗ್ರಹಾರಾಧನೆ ಎಂತಲ್ಲ, ಅದು ಆಕೃತಿಯ ಪೂಜೆಯಲ್ಲ, ಬದಲಾಗಿ ಆದರ್ಶಮಯ ಪೂಜೆಯಾಗಿದೆ.**

## ವಂದನೆಗಳು

ಕೆಲವು ವಾಕ್ಯಗಳನ್ನು (ಶ್ಲೋಕ) ಬೌದ್ಧರು ನಿತ್ಯ ಪಠಿಸುತ್ತಾರೆ. ಅದರಲ್ಲಿ ಪರಮಶ್ರೇಷ್ಠಶಾಸ್ತರ ಬಗ್ಗೆ ಗೌರವ ಹಾಗು ಕೃತಜ್ಞತಾಭಾವ ಹಾಗೂ ಶ್ಲಾಘನೆಯನ್ನು ನಾವು ಕಾಣುತ್ತೇವೆ, ಅವು ಹೀಗಿದೆ : **ನಮೋ ತಸ್ಸ ಭಗವತೋ ಅರಹತೋ ಸಮ್ಮಾಸಂಬುದ್ಧಸ್ಸ.**

"ಭಗವಂತರೂ, ಅರಹಂತರೂ, ಸಂಪೂರ್ಣ ಬೋಧಿ ಪ್ರಾಪ್ತಿ ಮಾಡಿದಂತಹ ಬುದ್ಧರಿಗೆ ನಮಸ್ಕಾರಗಳು".

ಇದೇ ರೀತಿಯಲ್ಲಿ ಕೆಲವು ಗಾಥೆಗಳು ಅವರ ಮಹೋನ್ನತ ಸದ್ಗುಣಗಳನ್ನು ತಿಳಿಸುತ್ತದೆ ಅವು ಹೀಗಿದೆ :

"ಇತಿ ಪಿ ಸೋ ಭಗವಾ ಅರಹಂ, ಸಮ್ಮಾಸಂಬುದ್ಧೋ, ವಿಜ್ಜಾಚರಣ ಸಂಪನ್ನೋ, ಸುಗತೋ, ಲೋಕವಿದೂ ಅನುತ್ತರೋ ಪುರಿಸದಮ್ಮಸಾರಥೀ ಸತ್ಥಾ ದೇವ ಮನುಸ್ಸಾನಂ, ಬುದ್ಧೋ, ಭಗವಾ' ತಿ"

ಈ ಎಲ್ಲಾ ಶ್ಲೋಕಗಳು ಪಾಳಿ ಭಾಷೆಯಲ್ಲಿವೆ. ನೀವು ಈ ಭಾಷೆಗೆ ಹತ್ತಿರವಿಲ್ಲದಿದ್ದರೆ, ನಿಮಗೆ ಅರ್ಥವಾಗುವ ಭಾಷೆಯಲ್ಲೇ ಪಠಿಸಬಹುದು ಇದರ ಕನ್ನಡ ಅನುವಾದ ಹೀಗಿದೆ :

ಭಗವಾನರು (ಮಂಗಳಕರರು) ಹೀಗಿರುವರು, ಕಶ್ಮಲಮುಕ್ತರು ಆತಿಥ್ಯಕ್ಕೆ ಅರ್ಹರು, ಸರ್ವಜ್ಞಾನ ಸಂಪನ್ನರು, ವಿದ್ಯೆ ಹಾಗು ಆಚರಣೆ (ಶೀಲ)ಯಿಂದ ಕೂಡಿದ ಸಂಪನ್ನರು, ಸುಹಾದಿಯಲ್ಲಿ ನಡೆದವರು, ಸರ್ವ ಲೋಕಗಳನ್ನು ಬಲ್ಲವರು, ಮನುಷ್ಯರನ್ನು ದಮಿಸುವಲ್ಲಿ ಅನುತ್ತರರು, ದೇವ ಹಾಗು ಮನುಷ್ಯರಿಗೆ ಶಾಸ್ತರು (ಗುರುಗಳು) ಬುದ್ಧರು (ಜ್ಞಾನ ಪ್ರಾಪ್ತಿ ಮಾಡಿಕೊಂಡವರು) ಹಾಗು ಭಗವಾನರು (ಧನ್ಯತೆಯನ್ನು ನೀಡುವವರು)".



## ಒಂದು ಬೌದ್ಧ ಕಥೆ

ಇಲ್ಲೊಂದು ಕಥೆಯಿದೆ, ಈ ಕಥೆಯಿಂದ ನಮಗೆ ಬುದ್ಧರ ಸಾಕಾರ ರೂಪವು ನಮ್ಮ ಸ್ಮೃತಿವಿಕಾಸಕ್ಕೆ ಹಾಗು ಸ್ಫೂರ್ತಿವೃದ್ಧಿಗೆ ಎಷ್ಟೊಂದು ಪ್ರಾಧಾನ್ಯಮಯ ಎಂದು ತಿಳುವಳಿಕೆ ನೀಡುತ್ತದೆ. ಈ ಕಥೆಯು ಬೌದ್ಧ ಸಾಹಿತ್ಯದಲ್ಲಿ ಸಿಗುತ್ತದೆ. ಆದರೆ ಪಾಳಿ ತಿಪಿಟಕ ಸಾಹಿತ್ಯದಲ್ಲಿ ಸಿಗುವುದಿಲ್ಲ.

ಬುದ್ಧ ಭಗವಾನರು ಪರಿನಿಬ್ಬಾಣವಾಗಿ ನೂರು ವರ್ಷಗಳ ನಂತರ ಭಾರತದಲ್ಲಿ ನಿಷ್ಠಾವಂತ ಭಿಕ್ಷುವೊಬ್ಬನಿದ್ದ. ಆತನ ಹೆಸರೇ ಉಪಗುಪ್ತ. ಆತನು ಆ ಕಾಲದ ಪ್ರಸಿದ್ಧ ಬೋಧಕನಾಗಿದ್ದನು. ಆತನೇನಾದರೂ ಧಮ್ಮ ಬೋಧನೆ ಪ್ರಾರಂಭಿಸಿದರೆ ಸಾವಿರಾರು ಜನರು ನೂಕು ನುಗ್ಗಲಿನಲ್ಲಿ ಬಂದು ಧಮ್ಮವನ್ನು ಆಲಿಸುತ್ತಿದ್ದರು.

ಒಮ್ಮೆ ಮಾರನು (ದೇವ ಪಂಗಡದ ನಾಯಕ) ಈ ಉಪಗುಪ್ತನ ಪ್ರಖ್ಯಾತಿಯಿಂದ ಅಸೂಯೆಪಟ್ಟನು. ಆತನಿಗೆ ಉಪಗುಪ್ತನಿಂದ ಬುದ್ಧ ಬೋಧನೆಯು ಹರಡುತ್ತಿದೆ ಎಂದು ಅರಿವಾಯಿತು. ಆತನಿಗೆ ಬುದ್ಧರ ಬೋಧನೆಯು ಹರಡುವುದು ಇಷ್ಟವಿರಲಿಲ್ಲ. ಆದ್ದರಿಂದ ಆತನು ಕುತಂತ್ರ ಮಾರ್ಗದಿಂದ ಜನರಲ್ಲಿ ಪ್ರಭಾವ ಬೀರಲು ನಿರ್ಧರಿಸಿದನು. ಆತನು ಜನರು ಉಪಗುಪ್ತನಿಂದ ಬೋಧನೆ ಆಲಿಸದಿರಲು ಒಂದು ಕುಟಿಲೋಪಾಯವನ್ನು ಮಾಡಿದನು. ಒಂದು ದಿನ ಉಪಗುಪ್ತನು ಬೋಧನೆ ಪ್ರಾರಂಭಿಸಿದ ಒಡನೆಯೇ ಆತನು ಪಕ್ಕದಲ್ಲೇ ನಾಟಕವೊಂದನ್ನು ಆರಂಭಿಸಿದನು. ಸುಂದರವಾದ ವೇದಿಕೆಯಲ್ಲಿ ಸುಂದರ ಯುವತಿಯರ, ಸಂಗೀತಭರಿತ ವಾತಾವರಣ ನಿರ್ಮಿಸಿದನು.

ಆಗ ಜನರು ಬೋದನೆಯನ್ನು ಮರೆತರು ಮತ್ತು ನಾಟಕದಲ್ಲಿ ತಲ್ಲೀನರಾದರು. ಉಪಗುಪ್ತನು ಜನರು ಮೆಲ್ಲಗೆ ಇಲ್ಲಿಂದ ಜಾರಿ ಅಲ್ಲಿ ಹೋಗಿ ಸೇರಲು ಆರಂಭಿಸಿದ್ದನ್ನು ನೋಡಿದನು. ಆಗ ಅವನು ಸಹಾ

ಆ ಜನಜಂಗುಳಿಯನ್ನು ಸೇರಿದನು. ಅವನು ಮಾರನಿಗೆ ತಕ್ಕ ಪಾಠ ಕಲಿಸಲು ನಿರ್ಧರಿಸಿದರು. ಯಾವಾಗ ನಾಟಕವು ಮುಗಿಯಿತೋ ಆಗ ಉಪಗುಪ್ತನು ಸಹಾ ಮಾರನಿಗೆ ಹೂವಿನ ಹಾರವನ್ನು ಅರ್ಪಿಸಿದನು.

"ಓಹ್, ನೀವು ಅದ್ಭುತವಾದ ಪ್ರದರ್ಶನವನ್ನು ನಿರೂಪಿಸಿದಿರಿ" ಎಂದು ಪೂಜ್ಯ ಉಪಗುಪ್ತನು ಹೇಳಿದನು.

ಮಾರನು ಸಹಾ ತನ್ನ ಸಾಧನೆಯಿಂದ ಹೆಮ್ಮೆಯಿಂದ ಕೂಡಿದ್ದನು. ಆತನು ಸಂತೋಷದಿಂದ ಉಪಗುಪ್ತನಿಂದ ಹೂಹಾರವನ್ನು ಹಾಕಿಕೊಂಡು ಅಹಂಕಾರದಿಂದ ಆಕಾಶವನ್ನು ನೋಡಿದನು.

ತಕ್ಷಣ ಆ ಹಾರವು ಹಾವಾಗಿ ಪರಿವರ್ತನೆ ಆಯಿತು. ನಂತರ ನಿಧಾನವಾಗಿ ಅದು ಮಾರನ ಕೊರಳನ್ನು ಬಿಗಿಯುತ್ತಾ ಹೋಯಿತು. ಆತನಿಗೆ ಉಸಿರುಗಟ್ಟಿಸಿತು. ಆತನ ಕತ್ತಿಗೆ ಅತಿ ನೋವಾಯಿತು. ಆತನು ದೇವತೆಗಳ ಒಡೆಯ ಇಂದ್ರನಿಂದ ಸಹಾಯ ಯಾಚಿಸಿದ. ಅವರಲ್ಲಿ ಹಾವನ್ನು ತೆಗೆಯಲು ಕೇಳಿಕೊಂಡನು. "ನಾನು ಅದನ್ನು ತೆಗೆಯಲಾರೆ, ಬ್ರಹ್ಮರಲ್ಲಿಗೆ ಹೋಗು ಅವರು ಮಹಾ ಬಲಿಷ್ಠರು" ಎಂದರು.

ಹೀಗಾಗಿ ಮಾರನು ಮಹಾ ಬ್ರಹ್ಮರ ಬಳಿಗೆ ಬಂದನು, ಅವರಿಂದ ಸಹಾಯ ಯಾಚಿಸಿದನು. ಆಗ ಬ್ರಹ್ಮರು ಈ ರೀತಿ ಹೇಳಿದರು.

"ನಾನು ಈ ಹಾವನ್ನು ಬಿಡಿಸಲಾರೆ, ಇದು ಯಾರು ನಿನ್ನ ಕೊರಳಿಗೆ ಹಾಕಿದರೋ ಅವರೇ ಬಿಡಿಸಲು ಶಕ್ಯರು" ಎಂದು ಹೇಳಿದರು.

ಆಗ ಮಾರನು ಮತ್ತೆ ಉಪಗುಪ್ತನ ಬಳಿಗೆ ಬರುತ್ತಾನೆ "ದಯವಿಟ್ಟು ಈ ಸುರುಳಿಯನ್ನು ಬಿಡಿಸು, ಇದು ಅತ್ಯಂತ ಯಾತನಾಮಯ" ಎಂದು ಬೇಡಿಕೊಂಡನು.

"ಹಾಗೆ ಆಗಲಿ, ಆದರೆ ನೀನು ಎರಡು ಕರಾರಿಗೆ ಒಪ್ಪಬೇಕು" ಎಂದು ಉಪಗುಪ್ತನು ಹೇಳಿದನು. ಒಂದನೆಯದಾಗಿ ನೀನು ಬೌದ್ಧ



ಉಪಾಸಕರಿಗೆ ಭವಿಷ್ಯದಲ್ಲಿ ತೊಂದರೆ ನೀಡಬಾರದು. ಎರಡನೆಯದಾಗಿ ನೀನು ಬುದ್ಧರ ರೂಪದಲ್ಲಿ ನನಗೆ ದರ್ಶನ ನೀಡಬೇಕು. ಏಕೆಂದರೆ ನನಗೆ ಗೊತ್ತಿದೆ, ನೀನು ಬುದ್ಧಭಗವಾನರನ್ನು ಹಲವುಬಾರಿ ಕಂಡಿದ್ದೀಯೆ ಹಾಗು ನಿನಗೆ ಆ ರೀತಿ ಆಕಾರ ತಾಳಲು ಸಾಧ್ಯವಿದೆ. ಆದ್ದರಿಂದ ಮಹಾಪುರುಷ ಲಕ್ಷಣಗಳಿಂದ ಕೂಡಿದ ಆ ಶರೀರವನ್ನು ತೋರಿಸುವಂತಾಗು" ಎಂದು ಕೇಳಿದಾಗ ಮಾರನು ಅನಂದಿತನಾದನು. ಆತನು ಉಪಗುಪ್ತನ ಒಪ್ಪಂದಕ್ಕೆ ಒಪ್ಪಿದನು ಹಾಗು ಈ ರೀತಿ ಹೇಳಿದನು.

"ಆದರೆ ಒಂದು ಮಾತು, ನಾನು ನನ್ನ ರೂಪದಿಂದ ಬುದ್ಧರೂಪಕ್ಕೆ ರೂಪಾಂತರ ಹೊಂದಿದಾಗ ನೀನು ನನಗೆ ಪೂಜಿಸಲಾರೆ ಎಂದು ಮಾತು ಕೊಡು, ಏಕೆಂದರೆ ನಾನು ನಿಮ್ಮಂತೆ ಪವಿತ್ರ ಮನುಷ್ಯನಲ್ಲ".

"ನಾನು ಪೂಜಿಸಲಾರೆ" ಎಂದು ಉಪಗುಪ್ತನು ಮಾತು ನೀಡಿದರು.

ತಕ್ಷಣ ಮಾರನು ತನ್ನನ್ನು ಬುದ್ಧರಂತೆ ರೂಪಾಂತರ ಮಾಡಿ ತೋರಿಸಿದನು. ಆ ದಿವ್ಯ ರೂಪವನ್ನು ಉಪಗುಪ್ತನ ಮನಸ್ಸಿನಲ್ಲಿ ಆನಂದ ಪ್ರವಾಹದ ರೀತಿ ಹರಿದು ಆಳ ಭಕ್ತಿಯುಕ್ಕಿ ಅರಿವಿಲ್ಲದೆಯೇ ಕೈಜೋಡಿಸಿ ಬುದ್ಧ ರೂಪಕ್ಕೆ ಪೂಜಿಸಿದನು.

"ನೀವು ನಿಮ್ಮ ವಚನವನ್ನು ಮುರಿದಿದ್ದೀರಿ" ಎಂದು ಮಾರನು ಆರ್ಭಟಿಸಿದನು. "ನೀವು ನನಗೆ ಪೂಜಿಸುವುದಿಲ್ಲ ಎಂದು ವಚನ ನೀಡಿಯೂ ಸಹ ಏಕೆ ಈಗ ಪೂಜಿಸಿದಿರಿ?"

"ನಾನು ನಿನಗೆ ಪೂಜಿಸಲಿಲ್ಲ, ಚೆನ್ನಾಗಿ ಅರ್ಥಮಾಡಿಕೊಳ್ಳಿ, ನಾನು ಬುದ್ಧರಿಗೆ ಪೂಜಿಸುತ್ತಿರುವೆನು" ಎಂದು ಪೂಜ್ಯ ಉಪಗುಪ್ತನು ಹೇಳಿದನು.

ಈ ಕಥೆಯಿಂದ ನಾವು ಬುದ್ಧರ ಸಾಕಾರವು ನಮ್ಮನ್ನು ಸ್ಫೂರ್ತಿಗೊಳಿಸಲು ಎಷ್ಟು ಪ್ರಾಧಾನ್ಯಕರ ಎಂದು ಅರ್ಥ ಮಾಡಿಕೊಳ್ಳಬಹುದು. ಹಾಗೆಯೇ ಇದು ನಮ್ಮ ಮನಸ್ಸಿಗೆ ಮೌಲ್ಯಭರಿತ

ವ್ಯಕ್ತಿತ್ವ ನೆನೆಯಲು ಸಹಾಯ ಮಾಡಿ ಪೂಜಿಸಲು ಸಹಾಯಕವಾಗುತ್ತದೆ. ನಾವು ಬೌದ್ಧರು ಭೌತಿಕ ಚಿಹ್ನೆಗಳನ್ನು ಆಗಲಿ ಅಥವಾ ಆಕಾರಗಳನ್ನಾಗಲಿ ಪೂಜಿಸಲಾರೆವು. ನಾವು ಪರಮಶ್ರೇಷ್ಠ ವ್ಯಕ್ತಿತ್ವವಾದ ಬುದ್ಧರನ್ನು ಗೌರವಾರ್ಪಣದಿಂದ ಪೂಜಿಸುತ್ತೇವೆ.

**ಸಮ್ಮಾಸಂಬುದ್ಧರ ಸಾಕಾರದಿಂದ ಸುಸ್ಫೂರ್ತಿ**

ಬುದ್ಧರು ಮಹಾ ಪರಿನಿಬ್ಬಾಣವನ್ನು ಪಡೆದಿದ್ದಾರೆ. ಅವರೆಂದೂ ಪೂಜೆಗಳನ್ನಾಗಲಿ ಮತ್ತು ಗೌರವಗಳನ್ನಾಗಲಿ ಲವಲೇಶವೂ ಅಪೇಕ್ಷೆಪಟ್ಟವರಲ್ಲ. ಆದರೂ ಜನರು ಪೂಜೆಯ ಪರಿಣಾಮದಿಂದಾಗಿ ಅಪಾರ ಲಾಭ ಗಳಿಸಿದ್ದಾರೆ. ಆರಾಧಕರು ಅವರನ್ನೇ ಆದರ್ಶವಾಗಿಟ್ಟುಕೊಂಡು ಅನುಸರಿಸುತ್ತಿದ್ದಾರೆ, ಅವರ ಪರಮೋಚ್ಚ ತ್ಯಾಗ ಮತ್ತು ಮಹೋನ್ನತ ಗುಣಗಳನ್ನು ಜೀವನದಲ್ಲಿ ತರುತ್ತಿದ್ದಾರೆ.

ಬೌದ್ಧರು ಬುದ್ಧರ ಹೆಸರಿನಲ್ಲಿ ಪ್ರಾಣಿ ಬಲಿಯನ್ನು ಮಾಡುತ್ತಿಲ್ಲ.

ಯಾವಗಲೇ ಆಗಲಿ, ಬೌದ್ಧರು ಬುದ್ಧರ ಸಾಕಾರವನ್ನು ನೋಡಿದಾಗ ಅವರ ಮನಸ್ಸಿನಲ್ಲಿ ಸುಖ, ಆನಂದವು ಉಕ್ಕಿ ದೇಹ ಮತ್ತು ಮನಸ್ಸನ್ನು ಹಗುರ ಮಾಡುತ್ತದೆ. ಈ ಭಕ್ತಿ ಅಥವಾ ಆನಂದವು ಬೌದ್ಧೋಪಾಸಕರಲ್ಲಿ ಪುಣ್ಯ ಕಾರ್ಯಗಳನ್ನು ಸೃಷ್ಟಿಸುತ್ತದೆ. ಅಷ್ಟೇ ಅಲ್ಲ, ಬುದ್ಧರ ಸಾಕಾರ ನೋಡುತ್ತಿದ್ದಂತೆಯೇ ಜನರಲ್ಲಿನ ಚಿಂತೆ, ಖಿನ್ನತೆ, ನೋವು ಮತ್ತು ಸಮಸ್ಯೆಗಳನ್ನು ತಾತ್ಕಾಲಿಕವಾಗಿ ಮರೆಯುತ್ತಾರೆ. ಈ ರೀತಿಯಾಗಿ ಮನಸ್ಸನ್ನು ನಿಯಂತ್ರಿಸಿ ಆ ಸಮಸ್ಯೆಗಳಿಗೆ ಕಾರಣ ಮತ್ತು ಪರಿಹಾರ ಕಂಡುಕೊಳ್ಳುತ್ತಾರೆ ಸುಖಿಯಾಗಿರುತ್ತಾರೆ.

ಇಂದು ವಿಶ್ವವಿಖ್ಯಾತ ತತ್ವಜ್ಞಾನಿಗಳು, ಇತಿಹಾಸಕಾರರು ಮತ್ತು ವಿದ್ವಾಂಸರು ತಮ್ಮ ಓದು ಕೋಣೆಯಲ್ಲಿನ ಟೇಬಲ್ಲಿನ ಮೇಲೆ ಬುದ್ಧಭಗವಾನರ ಮೂರ್ತಿಯನ್ನು ಸದಾ ಇಟ್ಟಿರುತ್ತಾರೆ. ಅದು ಅವರಲ್ಲಿ



ಶ್ರೇಷ್ಠ ಜೀವನ ಹಾಗೂ ಶ್ರೇಷ್ಠ ಚಿಂತನೆಗೆ ಸ್ಫೂರ್ತಿ ನೀಡುತ್ತದೆ. ಆಶ್ಚರ್ಯವೇನೆಂದರೆ ಇವರಲ್ಲಿ ಬಹಳಷ್ಟು ಜನರು ಬೌದ್ಧರೆತರಾಗಿದ್ದಾರೆ. ಬಹಳಷ್ಟು ಜನರು ತಮ್ಮ ಅಗಲಿದ ತಂದೆ–ತಾಯಿಯರಿಗೆ, ಗುರುಗಳಿಗೆ, ಮಹಾನ್ ಯೋಧರಿಗೆ, ರಾಜರಿಗೆ ಮತ್ತು ರಾಣಿಯರಿಗೆ, ರಾಷ್ಟ್ರೀಯ ಮತ್ತು ರಾಜಕೀಯ ನಾಯಕರಿಗೆ ಮತ್ತು ಪ್ರೀತಿಪಾತ್ರರಾದ ವ್ಯಕ್ತಿಗಳ ಭಾವಚಿತ್ರವನ್ನು ತಮ್ಮ ನೆನಪನ್ನು ಸದಾ ಹಸಿರಾಗಿಡಲು ಇಡುತ್ತಾರೆ. ಅವರು ಹೂಗಳನ್ನು ಇಟ್ಟು ತಮ್ಮ ಪ್ರೀತಿ, ಕೃತಜ್ಞತೆ, ಗೌರವ, ಅಭಿನಂದನೆ ಮತ್ತು ಭಕ್ತಿಯನ್ನು ತೋರುತ್ತಾರೆ. ಅವರು ಅವರ ಮಹೋನ್ನತ ಸದ್ಗುಣಗಳನ್ನು ನೆನೆಯುತ್ತ ಮತ್ತು ಅವರ ತ್ಯಾಗಗಳಿಂದ ಹೆಮ್ಮೆ ತಾಳಿ ಅವರು ಇದ್ದಾಗ ಮಾಡಿದಂತಹ ಸೇವೆ ನೆನೆದು ಕೃತಜ್ಞತಾ ಆನಂದ ಬಾಷ್ಪ ಸುರಿಸುತ್ತಾರೆ.

ಜನರು ಲಕ್ಷಾಂತರ ಮುಗ್ಧ ಜನರ ಸಾಮೂಹಿಕ ಹತ್ಯೆಗೈದ ರಾಜಕೀಯ ನಾಯಕರ ವಿಗ್ರಹಗಳನ್ನು ನಿಲ್ಲಿಸುತ್ತಾರೆ. ಆ ರಾಜಕೀಯ ನಾಯಕರು ತಮ್ಮ ಕ್ರೌರ್ಯದಿಂದ ಮತ್ತು ಲೋಭದಿಂದ ಅಧಿಕಾರ ಗಳಿಸಿದ್ದರೂ, ಅವರು ಬಡ ರಾಷ್ಟ್ರಗಳ ಮೇಲೆ ದಾಳಿ ನಡೆಸಿದ್ದರೂ, ಹೇಳಲಾಗದ ಅಪಾರ ದುಃಖಗಳನ್ನು ಸೃಷ್ಟಿಸಿದ್ದರೂ, ದೌರ್ಜನ್ಯಗಳನ್ನು ಮತ್ತು ತಮ್ಮ ಸುಲಿಗೆಗಾರ ಗುಂಪಿನಿಂದ ಹಿಂಸಿಸಿ ಡಕಾಯಿತಿ ನಡೆಸಿದ್ದರೂ ಸಹ ಅವರನ್ನು ಶ್ರೇಷ್ಠ ಯೋಧರಂತೆ ಗೌರವಿಸುತ್ತಿದ್ದಾರೆ. ಅವರಿಗಾಗಿ ಸ್ಮಾರಕ ಸೇವೆಗಳನ್ನು ನಿರ್ಮಿಸಿ ಗೌರವಿಸುತ್ತಿದ್ದಾರೆ. ಅವರ ಗೋರಿಗಳಿಗೆ ಹೂವುಗಳನ್ನು ಸಮರ್ಪಿಸುತ್ತಿದ್ದಾರೆ. ಅಂತಹ ಆಚರಣೆಗಳು ನ್ಯಾಯಬದ್ಧವೆಂದು ಸಮರ್ಥಿಸಿಕೊಳ್ಳುತ್ತಾರೆ. ಹೀಗಿರುವಾಗ ಏಕೆ ಕೆಲವು ಜನರು ಬುದ್ಧ ಅನುಯಾಯಿಗಳಿಗೆ ವಿಗ್ರಹ ಆರಾಧಕರೆಂದು ವ್ಯಂಗ್ಯ ಮಾಡುತ್ತಾರೆ? ಯಾವ ಮಹಾ ಚೇತನವು ಮೈತ್ರಿಯಿಂದ, ಮಹಾ ಕರುಣೆಯಿಂದ ಮತ್ತು ಪ್ರಜ್ಞಾ ಶೀಲತೆಯಿಂದ ಇಡೀ ಜಗತ್ತನ್ನು

ಜಯಿಸಿರುವುದೋ ಮತ್ತು ಯಾರು ಇಡೀ ಮಾನವತೆಗೆ ಸ್ವಲ್ಪವು ಪರರಿಗೆ ಹಾನಿಯಾಗದಂತೆ ಸೇವೆ ಮಾಡಿದ ಮಹಾನ್ ಧಾರ್ಮಿಕ ಗುರುಗಳಾಗಿರುವರೋ ಅವರನ್ನು ಗೌರವಿಸುವುದು ತಪ್ಪೇ?

ಯಾರಾದರೂ ಯೋಗ್ಯ ಬುದ್ಧಿವುಳ್ಳವ ಬುದ್ಧರಿಗೆ ಸಾಕಾರ ಭಾವಕ್ಕೆ ಗೌರವಿಸುವುದು ಅಸಂಸ್ಕೃತವೆಂದು ಹೇಳಲು ಸಾಧ್ಯವಿದೆಯೇ? ಈ ಬಗೆಯ ಆಚರಣೆಯಿಂದ ಯಾರಿಗಾದರೂ ಸುಖ ಮತ್ತು ಶಾಂತಿ ಭಂಗವಾಗಿ ಹಿಂಸೆಯಾಗುತ್ತಿದೆಯೇ?

ಒಂದುವೇಳೆ ಧರ್ಮಪಾಲನೆಗೆ ಸಾಕಾರವು ಅಗತ್ಯವಿಲ್ಲದೆ ಹೋದರೆ ಅನ್ಯ ಧರ್ಮಗಳು ತಮ್ಮ ಪೂಜೆಗೆ ಬಳಸುತ್ತಿರುವ ಎಲ್ಲಾ ರೀತಿಯ ಚಿಹ್ನೆಗಳು ಮತ್ತು ಪೂಜಾ ಸ್ಥಳಗಳು ಸಹಾ ಅಗತ್ಯವಿಲ್ಲ. ಕೆಲವರು ಬೌದ್ಧರಿಗೆ ಕಲ್ಲಿನ ಆರಾಧಕರೆಂದು ವ್ಯಂಗ್ಯ ಮಾಡುತ್ತಾರೆ. ಆದರೆ ಅಂತಹ ಮತಾಂಧ ವಾಕ್ಯವು ನಿಜವಾಗಿದ್ದರೂ ಸಹಾ ಕಲ್ಲಿಗೆ ಪೂಜಿಸುವ ಕಾರ್ಯವು ಕೆಲವು ಮತಾಂಧರು ಅನ್ಯ ಧರ್ಮೀಯರಿಗೆ ಕಲ್ಲು ಎಸೆಯುವ ಪ್ರವೃತ್ತಿಗಿಂತ ಎಷ್ಟೋ ಗೌರವಯುತವಾಗಿದೆ.

## ಸಾಧನೆಯ ಪ್ರಾಮುಖ್ಯತೆ

ಬುದ್ಧ ಭಗವಾನರ ಬೋಧನೆಗಳನ್ನು ಪಾಲಿಸಲು ಬುದ್ಧರ ಸಾಕಾರಕ್ಕೆ ಗೌರವಿಸುವುದು ಕಡ್ಡಾಯವಲ್ಲ. ಬೌದ್ಧರು ಬುದ್ಧರ ಪ್ರತಿಮೆಯಿಲ್ಲದೆಯೆ ಧರ್ಮವನ್ನು ಪಾಲಿಸಬಹುದು. ಏಕೆಂದರೆ ಬುದ್ಧರು ಯಾವ ವ್ಯಕ್ತಿಗೂ ಅವಲಂಬಿತವಾಗದೆ ಬದುಕುವುದನ್ನು ಪ್ರೋತ್ಸಾಹಿಸಿದ್ದಾರೆ. ಬುದ್ಧರ ಬೋಧನೆಯ ಪ್ರಕಾರ ಯಾರು ಪರರಿಗೆ ಅವಲಂಬಿತವಾಗಬಾರದು, ತಮ್ಮ ವಿಮುಕ್ತಿಗಾಗಿ ಬುದ್ಧರ ಮೇಲೂ ಸಹಾ ಅವಲಂಬಿತವಾಗಬಾರದು!

ಬುದ್ಧರ ಕಾಲದಲ್ಲಿ ವಕ್ಕಲಿ ಎಂಬ ಭಿಕ್ಷುವಿದ್ದನು. ಆತನು ಸದಾ ಬುದ್ಧ ಭಗವಾನರ ಮುಂದೆ ಕುಳಿತು ಅವರ ಅನುಪಮ ಭೌತಿಕ



ಸೌಂದರ್ಯದಲ್ಲಿ ತಲ್ಲೀನನಾಗುತ್ತಿದ್ದನು. ಆತನ ಸಮರ್ಥನೆ ಏನೆಂದರೆ ಬುದ್ಧರ ಸೌಂದರ್ಯದಿಂದ ಅಪಾರ ಆನಂದ ಹಾಗು ಸ್ಫೂರ್ತಿ ದೊರೆಯುತ್ತದೆ ಎಂಬುದು. ಆದರೆ ಬುದ್ಧರು ಆತನಿಗೆ ಈ ರೀತಿ ಬುದ್ಧಿವಾದ ನೀಡಿದರು "ನೀನು ಭೌತಿಕ ಶರೀರವನ್ನು ಧ್ಯಾನಿಸುತ್ತಾ ನಿಜ ಬುದ್ಧನನ್ನು ಎಂದಿಗೂ ನೋಡಲಾರೆ (ಅರಿಯಲಾರೆ). ಯಾರು ನನ್ನ ಬೋಧನೆಯನ್ನು ನೋಡುವರೋ (ಅರಿಯುವರೋ) ಅವರು ನನ್ನನ್ನು ನೋಡುವರು (ಅರಿಯುವರು)".

ಬೌದ್ಧ ಧಮ್ಮದಲ್ಲಿ ಅತ್ಯಂತ ಪ್ರಧಾನವಾದ ಅಂಶ ಏನೆಂದರೆ ಬುದ್ಧ ಉಪದೇಶಗಳನ್ನು ಪಾಲಿಸಿ ಸಿದ್ಧಿಸುವುದು. ಈ ಪ್ರಾಯೋಗಿಕ ವಿಧದಿಂದ ಬೌದ್ಧರು ಬುದ್ಧರಿಗೆ ಗೌರವಿಸುತ್ತಾರೆಯೋ ಅಥವಾ ಇಲ್ಲವೋ ಅದು ಯಾವುದೇ ವ್ಯತ್ಯಾಸ ಉಂಟು ಮಾಡುವುದಿಲ್ಲ. ಆದರೆ ಬಹಳಷ್ಟು ಉಪಾಸಕರಿಗೆ ಇದು ಪ್ರಧಾನವಾದ ಆಚರಣೆಯಾಗಿದೆ. ಹೇಗಿದ್ದರೂ ಬುದ್ಧರು ಮಾತ್ರ ಗೌರವ ಭಕ್ತಿಗಳಿಗೆ ಕಾಯುತ್ತೇನೆ ಎಂದು ಎಂದೂ ಹೇಳಿಲ್ಲ. (ಅವರಲ್ಲಿ ಅಂತಹ ಸ್ವಾರ್ಥ ಎಂದಿಗೂ ಇರಲಿಲ್ಲ).

## ಬುದ್ಧ ಪ್ರತಿಮೆಯ ಆರಂಭ

ಹಾಗಾದರೆ ಬುದ್ಧ ಪ್ರತಿಮೆ ಹೇಗೆ ಆರಂಭವಾಯಿತು? ಇದರ ಪ್ರಸ್ತಾಪ ಬುದ್ಧರಿಂದ ಬಂದಿತೆ ಅಥವಾ ಇಲ್ಲವೆ? ಇದನ್ನು ಉತ್ತರಿಸುವುದು ಕಷ್ಟಕರ ವಿಷಯವಾಗಿದೆ. ಇಡೀ ಪಾಳಿ ಸಾಹಿತ್ಯ (ತಿಪಿಟಕ)ದಲ್ಲಿ ಬುದ್ಧರು ಹಾಗೆ ಹೇಳಿರುವುದು ಎಲ್ಲೂ ಕಂಡುಬಂದಿಲ್ಲ. ಆದರೆ ಅವರ ಅಸ್ತಿ ಅವಶೇಷವನ್ನು ಕಾಪಾಡಲು ಒಪ್ಪಿಗೆ ನೀಡಿದ್ದಾರೆ.

ಒಮ್ಮೆ ಪೂಜ್ಯ ಆನಂದರವರು ಬುದ್ಧರ ಚೈತ್ಯ (ಪಗೋಡ) ನಿಲ್ಲಿಸುವ ಬಗ್ಗೆ ಕೇಳಿದರು. ಏಕೆಂದರೆ ಹಲವಾರು ಊರುಗಳಲ್ಲಿ ಬುದ್ಧರ ಅನುಪಸ್ಥಿತಿಯಲ್ಲಿ ಗೌರವಿಸಬಹುದೆಂದು ಅವರ ಅಭಿಲಾಶೆಯಾಗಿತ್ತು.

ಆದ್ದರಿಂದ ಅವರು ಬುದ್ಧರೊಂದಿಗೆ ಈ ರೀತಿ ಕೇಳಿದರು. "ಭಗವಾನ್ ತಾವು ಇರುವಾಗಲೇ ತಮ್ಮ ಸ್ತೂಪವನ್ನು ಕಟ್ಟಿಸಿ ನಿಲ್ಲಿಸಬಹುದೇ?"

ಆಗ ಭಗವಾನರು ಈ ರೀತಿ ಉತ್ತರಿಸಿದರು "ಬೇಡ, ನಾನು ಜೀವಿಸಿರುವಾಗಲೇ ಹಾಗೆ ಮಾಡುವುದು ಸಮಂಜಸವಲ್ಲ. ನಾನು ಪರಿನಿಬ್ಬಾಣ ಪ್ರಾಪ್ತಿ ಮಾಡಿದ ನಂತರ ಬೇಕಾದರೆ ಕಟ್ಟಿಸಬಹುದು".

ಹಾಗು ಮಹಾ ಪರಿನಿಬ್ಬಾಣ ಸುತ್ತದಲ್ಲಿ ಅಂದರೆ ತಮ್ಮ ಅಂತಿಮ ಕಾಲದಲ್ಲಿ ಆನಂದರವರು ಇಂತಹುದೇ ಪ್ರಸ್ತಾಪ ಮಾಡಿದಾಗ ಬುದ್ಧರು ಬುದ್ಧಿವಾದ ನುಡಿಯುವುದು ಏನೆಂದರೆ ಅವರ ಮಹಾ ಪರಿನಿಬ್ಬಾಣದ ನಂತರ ಆ ಪವಿತ್ರ ಅಸ್ತಿಗಳಿಗೆ ಸ್ತೂಪ ಬೇಕಾದರೆ ನಿರ್ಮಿಸಬಹುದು ಎಂದು ಸೂಚಿಸುತ್ತಾರೆ. ಇದು ಆ ಕಾಲದ ಪದ್ಧತಿಯಾಗಿತ್ತು. ಆಗ ಪವಿತ್ರ ಪುರುಷರಿಗೆ ಅವರ ಅಸ್ತಿಯ ಮೇಲೆ ಪಗೋಡಗಳನ್ನು ನಿರ್ಮಿಸುತ್ತಿದ್ದರು. ಅದು ಆ ಪೂಜ್ಯ ಪುರುಷರ ಜ್ಞಾಪಕಾರ್ಥವಾಗಿ ಹಾಗು ಗೌರವಾರ್ಥವಾಗಿ ಕಟ್ಟಿಸುತ್ತಿದ್ದರು. ಬುದ್ಧರು ತಮ್ಮ ಪ್ರತಿಮೆಯನ್ನು ನಿರ್ಮಿಸಿ ಎಂತಲೂ ಹೇಳಿಲ್ಲ, ಹಾಗೆಯೇ ಬೇಡ ಎಂದೂ ಹೇಳಿಲ್ಲ. ಅಂದರೆ ಪ್ರೋತ್ಸಾಹಿಸಲೂ ಇಲ್ಲ, ನಿರುತ್ಸಾಹಿಸಲೂ ಇಲ್ಲ. ಬುದ್ಧ ಪ್ರತಿಮೆಯ ಉಪಾಯ ಮಾಡಿದ್ದೇ ಅವರ ಅನುಯಾಯಿಗಳು. ಅವರು ತಮ್ಮ ಪರಮೋತ್ತರ ನಾಯಕರಿಗೆ ಗೌರವಿಸಲು ಸದಾ ಬಯಸುತ್ತಿದ್ದರು. ಅಂತಹ ಪ್ರಶಾಂತ ವ್ಯಕ್ತಿತ್ವದಿಂದ ಸದಾ ಸ್ಫೂರ್ತಿ ಪಡೆಯಲು ಆಶಿಸುತ್ತಿದ್ದರು. ಈ ಪ್ರತಿಮೆಗಳು ಸ್ಥಾಪಿಸುವ ಮುನ್ನ ಅವರು ಬುದ್ಧರ ಪವಿತ್ರ ಅಸ್ತಿಗೆ ಗೌರವ ಸಲ್ಲಿಸುತ್ತಿದ್ದರು.

ಫಾಹಿಯಾನ್ ನಾಲ್ಕನೆಯ ಶತಮಾನದಲ್ಲಿ ಭಾರತದಲ್ಲಿ ಬಂದು ಆಗಿನ ಎಲ್ಲಾ ಘಟನೆಗಳನ್ನು ವಿವರಿಸಿದ್ದಾನೆ. ಆತನಲ್ಲಿ ಒಂದು ದಾಖಲೆಯಿದೆ. ಅದರಲ್ಲಿ ಪ್ರಥಮವಾಗಿ ಬುದ್ಧ ಪ್ರತಿಮೆ ಹೇಗೆ ಆರಂಭವಾಯಿತು ಎಂಬ ವಿವರಣೆಯಿದೆ. ಆದರೂ ಬೌದ್ಧ ಸಾಹಿತ್ಯವು



ಆತನ ದಾಖಲಾತಿ ಬಗ್ಗೆ ನಿಶ್ಶಬ್ದವಾಗಿದೆ. ಹಾಗಿದ್ದರೂ ಆ ಪೌರಾಣಿಕ ಕಥಾನಕವು ಹೀಗಿದೆ :

ಬುದ್ಧ ಭಗವಾನರು ಅಭಿಧಮ್ಮ ಬೋಧನೆಯನ್ನು ವಿವರಿಸಲು 3 ತಿಂಗಳು ತಾವತಿಂಸ ದೇವಲೋಕದಲ್ಲಿ ಹೋಗಿದ್ದರು. ಆಗ ಅವರ ಅನುಪಸ್ಥಿತಿಯಲ್ಲಿ ಜನರು ವಿಹಾರದಲ್ಲಿ ಬುದ್ಧರ ಇಲ್ಲದಿರುವಿಕೆಯನ್ನು ಕಂಡು ದುಃಖತಪ್ತರಾದರು. ಆಗ ಅವರ ದೂರು ಕೇಳಿದ ಪೂಜ್ಯ ಸಾರಿಪುತ್ತರು ಈ ಘಟನೆಯನ್ನು ಬುದ್ಧರಿಗೆ ವಿವರಿಸಿದರು. ಆಗ ಬುದ್ಧರು ತಮ್ಮ ಪ್ರತಿಮೆ ನಿರ್ಮಿಸುವಂತಹ ಶಿಲ್ಪಿಯನ್ನು ಹುಡುಕಲು ಸಲಹೆಯಿತ್ತರು. ಈ ವಿಷಯನ್ನು ಸಾರಿಪುತ್ತರು ರಾಜನಿಗೆ ತಿಳಿಸಿದಾಗ ಒಬ್ಬ ಶಿಲ್ಪಿಯನ್ನು ಹುಡುಕಲಾಯಿತು. ಆತನು ಶ್ರೀಗಂಧದ ಬುದ್ಧ ಪ್ರತಿಮೆಯನ್ನು ನಿರ್ಮಿಸಿದನು. ನಂತರ ಆ ಪ್ರತಿಮೆಯನ್ನು ಚೈತ್ಯದಲ್ಲಿ ಇಡಲಾಯಿತು. ಜನರು ಅತ್ಯಾನಂದ ಹೊಂದಿದರು. ಫಾಹಿಯಾನ್‌ರ ಪ್ರಕಾರ ಅಂದಿನಿಂದ ಪ್ರತಿಮೆಗಳ ಪೂಜೆ ಆರಂಭವಾಯಿತು.

ಆದರೆ ಬೌದ್ಧ ಸಾಹಿತ್ಯದಲ್ಲಿ ಈ ದಾಖಲಾತಿ ನಂಬುವಂತಹ ಸಾಕ್ಷ ಕಷ್ಟಕರವಾಗಿ ಹುಡುಕಬೇಕಾಗಿದೆ. ಚರಿತ್ರೆಯ ಪ್ರಕಾರ ಬುದ್ಧ ಪ್ರತಿಮೆಗಳು ಬುದ್ಧರ ಪರಿನಿಬ್ಬಾಣದ 500 ಅನಂತರ ನಿರ್ಮಾಣವಾದವು. ಪ್ರತಿಮೆ ನಿರ್ಮಾಣಕ್ಕೆ ಹಿಂದೆ ಉಪಾಸಕರು ಕಮಲದ ಹೂವಿಗೆ ಅಥವಾ ಬುದ್ಧರ ಪಾದದ ಚಿಹ್ನೆಯ ಚಿತ್ರಕ್ಕೆ ಪೂಜಿಸುತ್ತಿದ್ದರು. ಪ್ರಾರಂಭದಲ್ಲಿ ಬೌದ್ಧರು ಸಹಾ ಬುದ್ಧ ಪ್ರತಿಮೆಗೆ ಅಷ್ಟು ಒಲವು ತೋರಲಿಲ್ಲ. ಏಕೆಂದರೆ ಬುದ್ಧ ಭಗವಾನರ ಆ 32 ಮಹಾಪುರುಷ ಲಕ್ಷಣಗಳ ಸ್ವರೂಪ ವಿರೂಪವಾಗಿ ಚಿತ್ರಣವಾಗಬಾರದೆಂದು ಅಪೇಕ್ಷಿಸಿದ್ದರು.

ಹಲವಾರು ಇತಿಹಾಸಕಾರರ ಪ್ರಕಾರ ಬುದ್ಧ ಪ್ರತಿಮೆಯು ಗ್ರೀಕರು ಭಾರತವನ್ನು ಬಂದು ನೆಲೆಸಿದಾಗ ಆಯಿತೆಂದು ಹೇಳುವರು. ಗ್ರೀಕರು ಬುದ್ಧ ಪ್ರತಿಮೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಿದರು ಹಾಗು ಸಹಾಯ

ಮಾಡಿದರು. ಆಗಿನ ಕಾಲದಲ್ಲೇ ಜಗತ್ತಿನ ಹಲವಾರು ಕಡೆ ಪ್ರತಿಮೆಗಳನ್ನು ಸ್ಥಾಪಿಸಲು ಪ್ರಾರಂಭಿಸಿದ್ದರು. ಪ್ರತಿ ದೇಶದ ಶೈಲಿಯಂತೆ ಅವರವರ ಕಲಾ ವ್ಯಕ್ತತೆಯಂತೆ ವಿಗ್ರಹಗಳು ರಚಿತವಾಯಿತು. ಪ್ರತಿ ಬೌದ್ಧ ರಾಷ್ಟ್ರದಲ್ಲೂ ಇತಿಹಾಸದ ಹಲವು ಕಾಲಾವಧಿಯಲ್ಲೂ ವಿವಿಧರೀತಿಯ ಶೈಲಿಯ, ವಿವಿಧ ಆಕಾರದ, ಬುದ್ಧ ಪ್ರತಿಮೆಗಳು ರಚಿತವಾದವು.

## ಬುದ್ಧ ಪ್ರತಿಮೆಯ ಬಗ್ಗೆ ವಿಚಾರಪರರ ಹೇಳಿಕೆಗಳು

ಭಾರತದ ಪ್ರಥಮ ಪ್ರಧಾನಿ ಪಂಡಿತ್ ನೆಹರೂರವರು ಬುದ್ಧ ಪ್ರತಿಮೆಯ ಬಗ್ಗೆ ಹೀಗೆ ಹೇಳುತ್ತಾರೆ :

"ಅವರ ಕಣ್ಣುಗಳು ಮುಚ್ಚಿರುತ್ತವೆ, ಆದರೆ ಆ ಮಹಾಚೈತನ್ಯದ ಮಹಾಶಕ್ತಿಯು, ಬಲಿಷಶಕ್ತಿಯು ಇಡೀ ಆಕಾರದಲ್ಲೆಲ್ಲಾ ತುಂಬಿಬಿಡುವುದು. ಕಾಲವು ಎಷ್ಟೇ ಸರಿಯುತ್ತಿದ್ದರೂ, ಬುದ್ಧರು ಮಾತ್ರ ದೂರವಿದ್ದಂತೆ ಅನಿಸುವುದಿಲ್ಲ. ಅವರ ಧ್ವನಿಯು ನಮ್ಮ ಕಿವಿಯಲ್ಲಿ ಪಿಸುಗುಟ್ಟುತ್ತದೆ ಮತ್ತು ನುಡಿಯುತ್ತದೆ. ಏನೆಂದರೆ ಸಂಘರ್ಷದಿಂದ ಓಡದಿರು, ಶಾಂತನೇತ್ರನಾಗಿ ಎದುರಿಸು ಮತ್ತು ಜೀವನದ ಅಭಿವೃದ್ಧಿಗೆ ಮತ್ತು ಮಹತ್ ಏಳಿಗೆಗೆ ಶ್ರೇಷ್ಠತೆಯ ಅವಕಾಶಗಳನ್ನು ನೋಡು". ಹಾಗೆಯೇ ನೆಹರೂರವರು ಹೀಗೆಂದಿದ್ದಾರೆ "ನಾನು ಜೈಲಿನಲ್ಲಿದ್ದಾಗ ಬುದ್ಧ ಪ್ರತಿಮೆಯ ಬಗ್ಗೆ ಯೋಚಿಸುತ್ತಿದ್ದೆ ಮತ್ತು ಅದು ನನಗೆ ಪ್ರಚಂಡ ಸ್ಫೂರ್ತಿ ನೀಡಿತು".

ಎರಡನೆ ಮಹಾಯುದ್ಧದ ಸಮಯದಲ್ಲಿ ಜನರಲ್ ಇಯಾನ್ ಹಮಿಲ್ಟನ್ ಬರ್ಮಾದ ದೇವಾಲಯದ ಅವಶೇಷಗಳಲ್ಲಿ ಬುದ್ಧ ಪ್ರತಿಮೆಯನ್ನು ಹುಡುಕಿದನು. ಅದನ್ನು ಆತನು ಗ್ರೇಟ್ ಬ್ರಿಟನ್‌ನ ಅಂದಿನ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಬಳಿಗೆ ಕಳುಹಿಸಿದನು. ಜೊತೆಗೆ ಈ ಸಂದೇಶ ಕಳುಹಿಸಿದನು:



"ಯಾವಾಗ ನೀವು ಚಿಂತೆಗೆ ಈಡಾಗುವಿರೋ ಆಗ ಕೇವಲ ಶ್ರದ್ಧೆಯುತ ದೃಷ್ಟಿಕೋನದಿಂದ ಇದನ್ನು (ಬುದ್ಧ ಪ್ರತಿಮೆ) ನೋಡಿ ಮತ್ತು ನಿಮ್ಮ ಚಿಂತೆಗಳತ್ತ ಮುಗುಳ್ನಗೆ ಬೀರಿ".

ಜರ್ಮನ್‌ನ ತತ್ವಶಾಸ್ತ್ರಜ್ಞ ಕೌಂಟ್ ಕಿಸೆರ್‌ಲಿಂಗ್ ಈ ರೀತಿಯ ಹೇಳಿಕೆ ನೀಡಿದ್ದಾರೆ : "ನಾನು ಬುದ್ಧ ಆಕೃತಿಗಿಂತ ಉದಾತ್ತವಾದುದು ಇಡೀ ಜಗತ್ತಿನಲ್ಲೇ ನೋಡಿಲ್ಲ. ಅದು ಗೋಚರ ಅಳ್ವಿಕೆಯಲ್ಲಿರುವ ಆಧ್ಯಾತ್ಮದ ಪರಿಪೂರ್ಣ ಸಾಕಾರದ ಪೂರ್ಣ ರೂಪದಲ್ಲಿದೆ".

ಮತ್ತೊಬ್ಬ ವಿದ್ವಾಂಸ ಹೀಗೆ ನುಡಿದಿದ್ದಾರೆ : "ಬುದ್ಧರ ವಿಗ್ರಹಗಳಲ್ಲಿ ನಾವು ಕಾಣುವುದು ಏನೆಂದರೆ ಸದ್ಗುಣಗಳ ಸಾಂಕೇತಿಕ ನಿರೂಪಣೆ. ನಾನು ನೀಡುವ ಗೌರವ ಮತ್ತು ಪೂಜೆ ಬುದ್ಧರಿಗೆ ಮಾತ್ರವಲ್ಲ, ಜೊತೆಗೆ ಸಾಂಕೇತಿಕವಾಗಿ ತುಂಬಿರುವ ಅವರ ಶ್ರೇಷ್ಠತ್ವಕ್ಕೆ. ನಾವು ಸುಖವನ್ನು ಅದರ ಬೋಧನೆಯಲ್ಲಿ ಹುಡುಕಬಹುದು".

ಶಾಂತತೆಯ ಹಾಗು ಪ್ರಸನ್ನ ಸೌಮ್ಯಭಾವದ ಬುದ್ಧ ಪ್ರತಿಮೆಯು ನಿಜಕ್ಕೂ ಸೌಂದರ್ಯದ ಆದರ್ಶ ಭಾವವೇ ಆಗಿದೆ. ಬುದ್ಧ ಪ್ರತಿಮೆಯು ಏಷಿಯಾದ ಸಂಸ್ಕೃತಿಯಲ್ಲೇ ಪರಮ ಅತ್ಯಮೂಲ್ಯವಾದುದು ಮತ್ತು ಸಾಮಾನ್ಯ ಸ್ವತ್ತಾಗಿದೆ. ಬುದ್ಧರ ಸಾಕಾರ ಬಿಂಬದ ಹೊರತು ಇಡೀ ಏಷಿಯಾವೇ ಅದು ಎಷ್ಟೇ ಅಭಿವೃದ್ಧಿ ಹೊಂದಿದರೂ ಕೇವಲ ಭೌಗೋಳಿಕ ವ್ಯಕ್ತತೆ ಆಗಿಬಿಡುತ್ತದೆ.

ಬೌದ್ಧರು ಬುದ್ಧ ಪ್ರತಿಮೆಯನ್ನು ಯಾವ ರೀತಿಯಲ್ಲಿ ಗೌರವಿಸುತ್ತಾರೆಂದರೆ ಪರಮಶ್ರೇಷ್ಠವಾದ ಸ್ಮಾರಕದಂತೆ. ಈ ಜಗತ್ತಿನಲ್ಲಿ ನೆಲಿಸಿದ ಪರಮ ಮೇಧಾವಿ, ಪರಮ ಪರಿಪೂರ್ಣ ಮತ್ತು ಕಾರುಣಿಕ ಧಮ್ಮ ಗುರುವಿನಂತೆ. ಬುದ್ಧರನ್ನು ಸ್ಮರಿಸಲು ಸಾಕಾರ ಬಿಂಬವು (ಪ್ರತಿಮೆ) ಬೇಕು ಮತ್ತು ಅವರ ಶ್ರೇಷ್ಠತೆಯ ಸದ್ಗುಣಗಳು ನಾಗರಿಕ ಜಗತ್ತಿನಲ್ಲಿ

ತಲತಲಾಂತರದಿಂದ ಲಕ್ಷ ಲಕ್ಷಾಂತರ ಜನರನ್ನು ಸ್ಫೂರ್ತಿಗೊಳಿಸಿವೆ. ಅದು ಅವರಿಗೆ ಬುದ್ಧರಲ್ಲಿ ಧ್ಯಾನಿಸಲು ಸಹಾಯಕವಾಗಿದೆ. ಅವರು ತಮ್ಮ ಪೂಜಾ ಕ್ರಿಯೆಯು ಶೋಭಾಯಮಾನವಾಗಿರಲು ಮತ್ತು ಅರ್ಥವತ್ತಾಗಿರಲು ತಾವು ಆ ಪೂಜ್ಯ ಗುರುವಿನ ಸನಿಹದಲ್ಲೇ ಇರುವಂತೆ ಅನುಭೂತಿ ತಾಳುತ್ತಾರೆ.

ಬೌದ್ಧರಾಗಿರುವ ಪಕ್ಷದಲ್ಲಿ ನಿಮ್ಮ ಮನೆಯಲ್ಲಿ ಬುದ್ಧ ಪ್ರತಿಮೆ ಅಥವಾ ಬುದ್ಧ ಭಾವಚಿತ್ರವು ಇರುವುದು ಅತ್ಯಂತ ಉಚಿತವಾಗಿದೆ. ದಯವಿಟ್ಟು ಆ ಪ್ರತಿಮೆಯನ್ನು ಅಲಂಕೃತ ಪ್ರದರ್ಶನದ ಬೊಂಬೆಯಾಗಿರಿಸದೆ ಅದನ್ನು ಮೆಚ್ಚುಗೆಯಾಗುವಂತಹ, ಸ್ಫೂತಿ ತುಂಬುವಂತಹ ಮತ್ತು ಶ್ರದ್ಧೆಯುಕ್ಕಿಸುವಂತಹ ರೀತಿಯಲ್ಲಿ ಇಡಿ. ಬುದ್ಧರ ಆ ಪ್ರಶಾಂತ ಬಿಂಬವು ಮೈತ್ರಿ ಪ್ರಕಾಶದ, ಪರಿಶುದ್ಧತೆಯ ಮತ್ತು ಪರಿಪೂರ್ಣತೆಯ ಸಾಕಾರ ರೂಪವೇ ಆಗಿದೆ. ಅದು ನಿಮಗೆ ಸಮಾಧಾನದ ಸಂಪನ್ಮೂಲವಾಗಿದೆ ಮತ್ತು ಸದಾ ಸಮಸ್ಯಯುತ ಜಗದಲ್ಲಿ ನೀವು ದೈನಂದಿನ ಕ್ರಿಯೆಯಲ್ಲಿ ನಿಮಗೆ ಯಾವುದೇ ಕಷ್ಟಗಳು ಮತ್ತು ಚಿಂತೆಗಳು ಬಂದರೂ ನೀವು ಅವನ್ನೆಲ್ಲಾ ಎದುರಿಸಲು ಅಪಾರ ಸ್ಫೂರ್ತಿ ನೀಡುತ್ತದೆ. ನೀವು ಬುದ್ಧರನ್ನು ಪೂಜಿಸಿದ್ದೇ ಆದರೆ ನೀವು ಶ್ರೇಷ್ಠಯುತ ಫಲವನ್ನು ಅನುಭವಿಸುವಿರಿ. ಆದರೆ ಅಲ್ಲಿ ನಿಮ್ಮ ಮನಸ್ಸು ಬುದ್ಧರ ಶ್ರೇಷ್ಠ ಮತ್ತು ಉದಾತ್ತ ಗುಣಗಳ ಬಗ್ಗೆ ಏಕಾಗ್ರ ವಹಿಸಬೇಕು.

ನೀವು ಶ್ರೇಷ್ಠ ಗುರುವಿನ ಬಗ್ಗೆ ಚಿಂತನೆ ಮಾಡಿದರೆ ನೀವು ಅವರ ಮಾರ್ಗದರ್ಶನದಿಂದ ಪೂರ್ಣರಾಗಬಲ್ಲಿರಿ. ಬುದ್ಧ ಭಾವಾಕೃತಿಯು ಈ ಜಗತ್ತು ಕಂಡಂತಹ ಅತ್ಯಂತ ಉತ್ಕೃಷ್ಟವಾದ, ಚಂದದ ಮತ್ತು ಪರಮ ಅಂದದ ಸುಂದರಾಕೃತಿ ಹಾಗು ಶಿಲ್ಪವಾಗಿದೆ. ಆದ್ದರಿಂದಲೇ ಗೌರವವು ಸ್ವಾಭಾವಿಕವಾಗಿ ಉಕ್ಕಿ ಹರಿದರೆ ಅದು ಅಸ್ವಾಭಾವಿಕವೇನಲ್ಲ.



ಮತ್ತೊಬ್ಬ ಖ್ಯಾತ ಲೇಖಕರು ತಮ್ಮ ತಾತ್ವಿಕ ಭಾಷೆಯಲ್ಲಿ ನಿಜವಾದ ಬುದ್ಧ ಗೌರವಾರ್ಪಣೆ ಕುರಿತು ಹೀಗೆ ಹೇಳುತ್ತಾರೆ :

“ನಾವು ಸಹ ಗೌರವಾರ್ಪಣೆಯ ಕ್ರಿಯೆ ಕಲಿಯಬೇಕಾಗಿದೆ. ಅದು ಆರಾಧನೆಯ ಮೂಲಕ. ಆದರೆ ವ್ಯಕ್ತಿಗಲ್ಲ. ಬದಲಾಗಿ ನಮ್ಮ ಹೃದಯದ ಆದರ್ಶಕ್ಕೆ. (ಏಕೆಂದರೆ ಸತ್ಯದ ಪ್ರಕಾರ ಎಲ್ಲಾ ವ್ಯಕ್ತಿತ್ವಗಳು ಸ್ವಪ್ನಮಯವಾಗಿದ್ದಾರೆ). ಆದ್ದರಿಂದ ನಾವು ಸದಾ ನವೀನ ಶಕ್ತಿಯನ್ನೇ ಹುಡುಕಬೇಕಾಗಿದೆ ಮತ್ತು ನಮ್ಮ ಜೀವನಗಳ ಪವಿತ್ರ ಸ್ಥಳ ಕಟ್ಟಬೇಕಾಗಿದೆ ಹಾಗು ನಮ್ಮ ಹೃದಯಗಳನ್ನು ಸ್ವಚ್ಛಗೊಳಿಸುತ್ತಿರಬೇಕು. ಎಲ್ಲಿಯವರೆಗೆಂದರೆ ಮೈತ್ರಿಯ ದೇವಾಲಯದ ಆಕೃತಿಯು ರಚಿತವಾಗಿ ಅರ್ಹವಾಗುವವರೆಗೂ. ಅಂತಹ ವೇದಿಕೆಯ ಮೇಲೆ ನಾವು ಇಡಬೇಕಾಗಿರುವುದು ಸಾಯುವಂತಹ ದೀಪಗಳಲ್ಲ, ಬಾಡುವಂತಹ ಪುಷ್ಪಗಳಲ್ಲ ಮತ್ತು ಕ್ಷಣಿಕತೆಯನ್ನಲ್ಲ. ಬದಲಾಗಿ ಪ್ರೀತಿಯ ಕೃತ್ಯಗಳು, ತ್ಯಾಗ ಮತ್ತು ಸರ್ವರಲ್ಲಿ ನಿಸ್ವಾರ್ಥತೆ”.

ಅನಟೋಲೆ ಫ್ರಾನ್ಸ್ ತನ್ನ ಆತ್ಮಚರಿತ್ರೆಯಲ್ಲಿ ಹೀಗೆ ಬರೆಯುತ್ತಾನೆ “1890ರ ಮೇ ಒಂದರಂದು ನನಗೆ ಪ್ಯಾರಿಸ್‌ನ ಮ್ಯೂಸಿಯಂನ್ನು ಬೇಟಿ ನೀಡುವ ಅವಕಾಶ ಒದಗಿತು. ಅಲ್ಲಿ ಶಾಂತತೆಯ ಮತ್ತು ಸರಳತೆಯ ಏಷಿಯಾದ ದೇವತೆಗಳು ನಿಂತಿದ್ದವು. ನನ್ನ ಕಣ್ಣು ಬುದ್ಧರ ಮೇಲೆ ನೆಟ್ಟಿತು. ಪ್ರಜ್ಞಾಶೀಲತೆ ಮತ್ತು ಕರುಣೆಯನ್ನು ಅಭಿವೃದ್ಧಿಗೊಳಿಸಿದ ಮಾನವತೆಯ ದುಃಖವನ್ನು ದೂರೀಕರಿಸಿದ ಆಕೃತಿಯದು. ಎಂದಾದರೂ ಈ ಪೃಥ್ವಿಯ ಮೇಲೆ ದೇವರು ಚಲಿಸಿದ್ದರೆ, ನನಗೆ ಅನುಭೂತಿಯಾಯಿತು ಅವರೇ ಇವರು. ಇಲ್ಲಿಯೇ ಇದ್ದಾರೆ, ನಾನು ದೇವರಲ್ಲಿ ಬಾಗಿ ಪ್ರಾರ್ಥಿಸಿದ ಅನುಭೂತಿಯಾಯಿತು (ದೇವರೇ ಬುದ್ಧರಾಗಿದ್ದಾರೆ ಎನಿಸಿತು).

ಶ್ರೀ ಔಸ್‌ಪೆನ್‌ಸ್ಕಿರವರು ಪಾಶ್ಚಾತ್ಯ ತತ್ವಶಾಸ್ತ್ರಜ್ಞರು, ಅವರು ಶ್ರೀಲಂಕಾದಲ್ಲಿ ಬುದ್ಧಾಕೃತಿ ನೋಡಿದ ನಂತರ ಅವರಲ್ಲಿ ಆದ ಅನುಭವವಿದು. "ಈ ಬುದ್ಧ ಪ್ರತಿಮೆಯು ಅತ್ಯಂತ ಅಸಾಧಾರಣವಾದ ಕಲಾಕೃತಿಯಾಗಿದೆ. ನಾನು ತಿಳಿದಂತೆ ಮತ್ತ್ಯಾವ ಕಲಾಕೃತಿಯು ಬುದ್ಧರ ಸಮಕ್ಕೆ ನಿಲ್ಲಲಾರದು ಮತ್ತು ಆ ಅನುಪಮ ನೀಲರತ್ನದ ನಯನಗಳು ಅದೇ ಸಂಪೂರ್ಣವಾಗಿ ಧಮ್ಮದ ಭಾವವನ್ನು ತಿಳಿಸುತ್ತದೆ. ಬುದ್ಧರ ಮುಖಾಕೃತಿಯೇ ಬೌದ್ಧ ಧಮ್ಮವನ್ನು ವ್ಯಕ್ತಪಡಿಸುತ್ತಿದೆ. ಅವರ ಮುಖಾರವಿಂದವನ್ನು ಅರಿಯುವುದೆಂದರೆ ಬುದ್ಧ ಧಮ್ಮವನ್ನು ಅರಿಯುವುದು". ಹಾಗೆಯೇ ಅವರು ಹೀಗೆ ಹೇಳಿದ್ದಾರೆ. "ಅಗಲವಾಗಿರುವ ಬೌದ್ಧ ಧಮ್ಮದ ಸಂಪುಟಗಳನ್ನು ಓದುವ ಅಗತ್ಯವಿಲ್ಲ. ಒಬ್ಬ ಇಲ್ಲಿಗೆ ಬರಲಿ, ಬುದ್ಧರ ಮುಂದೆ ನಿಂತು ಬುದ್ಧಾಕೃತಿಯ ಮೇಲೆ ನೋಟ ಹರಿಸಲಿ, ಆ ನೀಲರತ್ನದ ನಯನಗಳೊಂದಿಗೆ ಸಂಪರ್ಕಿಸಿದರೆ ತಕ್ಷಣ ಆತನಿಗೆ ಬೌದ್ಧಧಮ್ಮ ಅರ್ಥವಾಗಿಹೋಗುತ್ತದೆ".

ಬೌದ್ಧರ ಸುಂದರ ಶಿಲ್ಪಕಲೆ ಮತ್ತು ಚಿತ್ರಕಲೆಯಿಂದ ಬಹಳಷ್ಟು ಬೌದ್ಧ ಕಥೆಗಳು ಪ್ರಚಂಡ ಸ್ಫೂರ್ತಿಯನ್ನು ಹಾಗು ಕಲೆ ಮತ್ತು ಸಂಸ್ಕೃತಿಯನ್ನು ಸಂವೃದ್ಧಿಗೊಳಿಸಿವೆ. ಪ್ರತಿ ಏಷಿಯಾ ದೇಶ 2000 ವರ್ಷಗಳಿಂದ ಈ ರೀತಿ ನಡೆದುಬಂದಿದೆ.

ಯಾವುದು ಬುದ್ಧರ ಸಂದೇಶವನ್ನು ಅತ್ಯಂತ ಆಕರ್ಷಕವನ್ನಾಗಿ ಮಾಡುತ್ತದೆ? ಯಾರು ಅವರ ಬುದ್ಧಿಮತ್ತೆಯನ್ನು ವೃದ್ಧಿಗೊಳಿಸಿರುವವರು? ಬಹುಶಃ ಇದಕ್ಕೆ ಉತ್ತರವನ್ನು ನಾವು ಬುದ್ಧರ ಪ್ರತಿಮೆಯ ಸೌಮ್ಯಭಾವದಲ್ಲಿ ಪಡೆಯಬಹುದು. ಕೇವಲ ಬಣ್ಣ ಮತ್ತು ರೇಖೆಗಳೇ ಬುದ್ಧರಲ್ಲಿನ ಶ್ರದ್ಧೆಯನ್ನು ಅವರ ಬೋಧನಾ ಧನ್ಯತೆಯನ್ನು ವ್ಯಕ್ತಪಡಿಸಲಾರವು. ಮಾನವನ ಹಸ್ತಗಳು ಲೋಹಗಳಲ್ಲಿ ಮತ್ತು ಕಲ್ಲಿನಲ್ಲಿ ಬೆರೆತು ಬುದ್ಧಾಕೃತಿಯನ್ನು ನೀಡುತ್ತವೆ. ನಿಜಕ್ಕೂ ಬುದ್ಧಾಕೃತಿಯು ಮಾನವನ ಮೇಧಾವಿತನದ ಶ್ರೇಷ್ಠ ಸೃಷ್ಟಿಗಳಲ್ಲಿ ಒಂದು.



ನಿಜವಾಗಿಯು ಬೌದ್ಧರು ಬುದ್ಧರನ್ನು ಅವರ ಭವ್ಯವಾದ ಪ್ರಭೆಯನ್ನು ಮತ್ತು ಅವರ ಆದರ್ಶದ ಸುಂದರತೆಯ ಸಾಮಿಪ್ಯವನ್ನು ಗಮನಿಸಲು ಇಚ್ಛಿಸಿದರೆ, ಅವರು ಬುದ್ಧರ ತತ್ವಗಳನ್ನು ದಿನನಿತ್ಯದ ಎಲ್ಲಾ ಸನ್ನಿವೇಶದಲ್ಲಿ ಸಾಧಿಸಬೇಕು, ಪಾಲಿಸಬೇಕು. ಅವರ ಬೋಧನೆಯ ಪಾಲನೆಯಲ್ಲಿ ಅವರ ಸಾಮೀಪ್ಯ ಪಡೆಯಬಹುದು ಮತ್ತು ಅವರ ಚಿರ ಪ್ರಜ್ಞಾಶೀಲತೆಯ ಅಮೃತ ಪ್ರಭಾವಳಿಯನ್ನು ಹಾಗೆಯೇ ಅವರ ಕರುಣೆಯನ್ನು ಅನುಭವಿಸಬಹುದು. ಕೇವಲ ಪ್ರತಿಮೆಗಳಿಗೆ ಗೌರವಿಸುತ್ತಾ, ಅವರ ಉದಾತ್ತವಾದ ಬೋಧನೆಯನ್ನು ಪಾಲಿಸದಿದ್ದರೆ ಅವರು ವಿಮುಕ್ತಿಯನ್ನು ಪಡೆಯಲಾರರು.

ಯಾರ ಜೀವನವು ಅತ್ಯಂತ ಸುಂದರವೋ, ಯಾರ ಹೃದಯವು ಅತ್ಯಂತ ಸ್ವಚ್ಛ ಹಾಗು ದಯಾಮಯವೋ, ಯಾರ ಮನಸ್ಸು ಅತ್ಯಂತ ಆಳ ಹಾಗು ಜ್ಞಾನೋದಯ ಹೊಂದಿರುವುದೋ, ಯಾರು ಸ್ಫೂರ್ತಿಯ ಚಿಲುಮೆಯೋ ಹಾಗು ನಿಸ್ವಾರ್ಥವುಳ್ಳವರೋ, ಅಂತಹ ಪರಿಪೂರ್ಣ ಜೀವನ, ಕರುಣಾಭರಿತ ಹೃದಯ ಅಂತಹ ಶಾಂತ ಮನಸ್ಸು, ಅಂತಹ ಪ್ರಸನ್ನ ವ್ಯಕ್ತಿತ್ವ ನಿಜಕ್ಕೂ ಗೌರವಾರ್ಹ ಮತ್ತು ಪೂಜ್ಯನೀಯವಾದುದು. ಬುದ್ಧರು ಮಾನವತೆಯ ಪರಮೋಚ್ಛ ಪರಿಪೂರ್ಣ ಸ್ವರೂಪರು ಮತ್ತು ಮಾನವತೆಯ ಮಹಾ ಪುಷ್ಪವಾಗಿದ್ದಾರೆ.

ಸರ್ ಎಡ್ವಿನ್ ಅರ್‌ನಾಲ್ಡ್ ತಮ್ಮ ಕೃತಿಯಾದ 'ಲೈಟ್ ಆಫ್ ಏಷಿಯಾ'ದಲ್ಲಿ ಬುದ್ಧರ ಸ್ವಭಾವವನ್ನು ಈ ರೀತಿ ಹೇಳುತ್ತಾರೆ :

"ಮಾನವ ವೃಕ್ಷದಲ್ಲಿ ಅನುಪಮ ಹೂವೊಂದಿದೆ,
ಅದು ಅರಳುವುದು ಹಲವು ಕೋಟ್ಯಾನುಕೋಟಿ ವರ್ಷಗಳಿಗೊಮ್ಮೆ,
ಆದರೆ ಅದು ಅರಳಿದಾಗ ಜಗದಲ್ಲೆಲ್ಲಾ ಪ್ರಜ್ಞಾದ ಸುವಾಸನೆಯೇ,
ಹಾಗು ಪರಿಶುದ್ಧ ಪ್ರೀತಿಯ ಮಧುವಿನ ತೊಟ್ಟಿಕ್ಕುವಿಕೆಯೇ".

## ‘ಸಬ್ಬ ದಾನಂ ಧಮ್ಮ ದಾನಂ ಜಿನಾತಿ’
## ಎಲ್ಲ ದಾನಗಳಲ್ಲಿ ಧಮ್ಮ ದಾನವು ಶ್ರೇಷ್ಠವಾದುದು

**– ಧಮ್ಮಪದ**

ಈ ಪುಸ್ತಕ ಮತ್ತು ಇಂಥ ಅನೇಕ ಪುಸ್ತಕಗಳು ಸಾವಿರಾರು ಜನರಿಗೆ ಧಮ್ಮದಾನವಾಗಿ ಕೈ ಸೇರಿವೆ. ಇದು ಧಮ್ಮ ದಾನ ಮಾಡಬೇಕೆಂಬ ಕುಶಲ ಚಿತ್ತದಿಂದ ಯೋಚಿಸಿದವರ ಕೊಡುಗೆ.

ನೀವು ಸಹ ನಿಮ್ಮ ಅಥವಾ ನಿಮ್ಮ ಕುಟುಂಬದವರ ಯಾವುದೇ ವಿಶೇಷ ಸಂದರ್ಭದಲ್ಲಿ, ಅಂದರೆ ಹುಟ್ಟು ಹಬ್ಬ, ಮದುವೆ, ನಾಮಕರಣ, ಪುಣ್ಯ ತಿಥಿ, ಗೃಹಪ್ರವೇಶ ಯಾವುದೇ ರೀತಿಯ ಯಶಸ್ಸು ಇತ್ಯಾದಿಗಳನ್ನು ಆಚರಿಸುವಾಗ ಅದರ ನೆನಪಿನಲ್ಲಿ ಇಂಥ ಚಿಕ್ಕ ದೊಡ್ಡ ಧಮ್ಮದ ಪುಸ್ತಕಗಳನ್ನು ಪ್ರಕಟಿಸಿ ದಾನ ಮಾಡಬಹುದು. ಮಿತ್ರರೊಂದಿಗೆ ಸಂಯುಕ್ತವಾಗಿಯೂ ದಾನ ಮಾಡಬಹುದು.

*ಇದಕ್ಕಾಗಿ ಸಂಪರ್ಕಿಸಿ*

**ಮಹಾ ಬೋಧಿ ಸೊಸೈಟಿ**
14, ಕಾಳಿದಾಸ ಮಾರ್ಗ, ಗಾಂಧಿನಗರ, ಬೆಂಗಳೂರು–560 009
ದೂರವಾಣಿ : 080–22250684 ಫ್ಯಾಕ್ಸ್ : 080–22264438
E-mail : books@mahabodhi.info



## ಮಹಾ ಬೋಧಿ ಸೊಸೈಟಿಗೆ
## ನೀವು ಹೇಗೆ ಸಹಾಯ ಮಾಡಬಹುದು ?

ಮಹಾ ಬೋಧಿ ಸೊಸೈಟಿಯು ಅನೇಕ ಧಮ್ಮ ಸೇವಾ ಕಾರ್ಯಗಳಲ್ಲಿ ತೊಡಗಿದೆ. ತಾವು ಮಹಾಬೋಧಿಯಲ್ಲಿನ ಬಿಕ್ಷು ತರಬೇತಿ ಕೇಂದ್ರಕ್ಕೆ, ಶಾಲೆ, ಹಾಸ್ಟೆಲುಗಳಿಗೆ ಪುಸ್ತಕ ಪ್ರಕಟಣೆಗೆ, ಪ್ರತಿನಿತ್ಯ ಬುದ್ಧ ಪೂಜೆಗಾಗಿ ಅಥವಾ ವಿಶೇಷ ಸೌಕರ್ಯಗಳಿಗಾಗಿ ಸಹಾಯ ಮಾಡಬಹುದು. ಮಹಾಬೋಧಿ ಸೊಸೈಟಿಯನ್ನು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ.

### ಮಹಾಬೋಧಿ ಬೌದ್ಧ ಅಧ್ಯಯನ ಕೇಂದ್ರ

ಈ ಕೇಂದ್ರವು 2 ವರ್ಷದ ಡಿಪ್ಲೊಮಾ ಕೋರ್ಸುಗಳನ್ನು ಬೌದ್ಧ ಧಮ್ಮದ ಬಗ್ಗೆ ನಡೆಸುತ್ತಿದೆ. ಇದು ಅಂಚೆ ಮೂಲಕವಿದ್ದು ನೀವು ಮನೆಯಲ್ಲಿಯೇ ಓದಬಹುದಾಗಿದೆ. ಪ್ರತಿ ಉಪಾಸಕ–ಉಪಾಸಕಿಯರಿಗೆ ಧಮ್ಮದ ಅರಿವು ಮೂಡಿಸುವುದೇ ಇದರ ಉದ್ದೇಶ.

**ಒಂದು ವರ್ಷಕ್ಕೆ ರೂ. 500/– ಎಲ್ಲ ಸೇರಿ.**

ಸಂಪರ್ಕಿಸಿ : **ಮಹಾಬೋಧಿ ಸೊಸೈಟಿ,** ಬೆಂಗಳೂರು